(Mr. SPEAKER)

appeared which does not in anyway say that the Minister or Ministers have made any statement to that effect. It refers to the proceedings of the Congress Party and it is not exactly the statement of the Ministers; and naturally, under the circumstances, I do not think any question of privilege or of convention or any question of wisdom is involved. After I made that statement in 1958, I have seen no Member of the Treasury Bench has ever made a statement of importance or of policy outside the House when the House is sitting and I do not mean that they have broken that Rule even now. So, I find that there is no case whatsoever.

As regards the admonition that I am called upon to administer to Ministers, I am very sorry under the circumstances, I cannot admonish anybody at all, because nothing has been done.

BUDGET ESTIMATES FOR 1961—62.

General Discussion—*Continued.*

†ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಮಾನ್ಯ ಸಭಾ ಪ್ರತಿಗಳೇ, 1961-62ನೇ ಸಾಲಿನ ಆಯವ್ಯಯ ಅಂದಾಜುಪಟ್ಟಿಯ ಮೇಲೆ ಕಳೆದ ಮೂರು-ನಾಲ್ಕು ದಿನಗಳಿಂದ ಈ ಸಭೆಯಲ್ಲಿ ಚರ್ಚೆ ನಡೆಯುತ್ತಾ ಇದೆ. ಅನೇಕ ಮಾನ್ಯ ಸದಸ್ಯರು ತಮಗೆ ತೋರಿದ ಒಳ್ಳೆಯ ಸಲಹೆಗಳನ್ನು ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪಮಾಡಿ ಈ ಸಭೆಯ ಗಮನಕ್ಕೆ ತಂದಿದ್ದಾರೆ. ಈ ಆಯವ್ಯಯ ಪಟ್ಟಿಯಲ್ಲಿ ಇರತಕ್ಕ ಪ್ರತಿಯೊಂದು ವಿಷಯದ ಮೇಲೆ ನನ್ನ ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ಹೇಳಬೇಕೆಂದಿದ್ದೇನೆ. ಇಷ್ಟೇ ಅಲ್ಲದೆ ಕೆಲವು ಮೂಲಭೂತವಾದ ವಿಷಯಗಳ ಮೇಲೆ ನನ್ನ ವಿಚಾರಗಳನ್ನು ಹೇಳುತ್ತೇನೆ. ಕಳೆದ ಮೂರು-ನಾಲ್ಕು ವರ್ಷಗಳಲ್ಲಿ ಸಭೆಯ ಮುಂದಿಟ್ಟ ಆಯವ್ಯಯ ಪಟ್ಟಿ ಒಂದಕಿಂತ ಮತ್ತೊಂದು ಬಹಳ ಉತ್ತಮವಾಗಿದೆ. ನಮ್ಮ ಅರ್ಥ ಸಚಿವರು ನಮ್ಮ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯ ಒಂದು ನೈಜವಾದ ಚಿತ್ರವನ್ನು ಕೊಟ್ಟಿದ್ದಾರೆ. ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ ಎಂಬುದನ್ನು ತಿಳಿಸಿದ್ದಾರೆ. ಹಳೇ ಮೈಸೂರಿನ ವಿಚಾರದಲ್ಲಿ ಮೊದಲನೆಯ ಯೋಜನೆಯಲ್ಲಿ ಸುಮಾರು 47 ಕೋಟಿ ರೂಪಾಯಿ ವೆಚ್ಚ, ಎರಡನೆಯ ಯೋಜನೆಯಲ್ಲಿ 140 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ ಎಂದು ತಿಳಿದುಬಂದಿದೆ. ಮೂರನೆಯ ಯೋಜನೆಯಲ್ಲಿ 250 ಕೋಟಿ ರೂಪಾಯಿ ವೆಚ್ಚ ಮಾಡಬಹುದೆಂದು ಅಂದಾಜು ಮಾಡಲಾಗಿದೆ. ಕಳೆದ ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾರಂಭಿಸಲಾಗಿರುವ ಕೆಲವು ಯೋಜನೆಗಳು ಪರಿಪೂರ್ಣವಾಗುತ್ತಿವೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ಯೋಜನೆಗಳನ್ನು ಪೂರ್ತಿಗೊಳಿಸುವದಕ್ಕೆ ಅಳವಡಿಸಿಕೊಳ್ಳಬೇಕಾಗಿದೆ. ಸಂಬಳ-ಸಾರಿಗೆಯ ಪುನರ್ವ್ಯವಸ್ಥೆಯಿಂದ 3½ ಕೋಟಿ ರೂಪಾಯಿ ಹೆಚ್ಚಿಗೆ ಒದಗಿಸಬೇಕಾಗಿದೆ. ಅಲ್ಲದೆ ನಮ್ಮ ಸಂಸ್ಥಾನದಲ್ಲಿರುವ ಬಡ ವಿದ್ಯಾರ್ಥಿಗಳಿಗೆ ವಿಶೇಷ ಸಹಾಯ ಕೊಟ್ಟಿರುವದಕ್ಕಾಗಿ ಸುಮಾರು 35 ಲಕ್ಷ ರೂಪಾಯಿಯಷ್ಟು ನಷ್ಟವಾಗಿದೆ. ಇದಲ್ಲದೆ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಗಳನ್ನು

---

† Indicates that the remarks or speeches have not been revised by the Member concerned.

ಉತ್ತಮ ಪಡಿಸುವದಕ್ಕೋಸ್ಕರ ಸುಮಾರು 30 ಲಕ್ಷ ರೂಪಾಯಿಗಳ ಹೆಚ್ಚಿನ ಹೊರೆ ಸರಕಾರದ ಮೇಲೆ ಬಿದ್ದಿದೆ. ಮದ್ಯಪಾನ ನಿರೋಧವನ್ನು ಮುಂದುವರಿಸಿಕೊಂಡು ಹೋಗುತ್ತಿರುವದರಿಂದ ಸರಕಾರಕ್ಕೆ ನಷ್ಟ ಉಂಟಾಗುತ್ತಿದೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿಚಾರ ಮಾಡಿದರೆ ಈ ವರ್ಷದ ಹಣಕಾಸಿನ ಪರಿಸ್ಥಿಯಲ್ಲಿ ಸುಮಾರು 4 ಕೋಟಿ 31 ಲಕ್ಷ ರೂಪಾಯಿಗಳ ಕೊರತೆ ಬರುತ್ತದೆ ಎಂದು ತಿಳಿಸಿದ್ದಾರೆ. ರಾಜ್ಯದ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಇನ್ನೂ ಅವಕಾಶವಿದೆ. ತೆರಿಗೆಯ ರೂಪದಲ್ಲಿ ವರಮಾನ ಹೆಚ್ಚಿಸಿಕೊಳ್ಳಬಹುದು. Small Savings Scheme ನಿಂದ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದೆಂಬ ಸಲಹೆ ಅವರು ಕೊಟ್ಟಿದ್ದಾರೆ. ಕೆಲವು ಇಲಾಖೆಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಆದಾಯವನ್ನು ಹೆಚ್ಚಿಸಿಕೊಳ್ಳಲು ಅವಕಾಶವಿದೆ. ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಉತ್ಪತ್ತಿ ಹೆಚ್ಚಿಸಬಹುದು. ಆದರೆ ಹೋದ ವರ್ಷಕ್ಕಿಂತ ಈ ವರ್ಷ ಉತ್ಪತ್ತಿ ಕಡಿಮೆ ಬರುತ್ತದೆಂದು ಹಾಕಿಕೊಂಡಿದ್ದಾರೆ. ಈ ಇಲಾಖೆಯಲ್ಲಿಯ ಲೀಕೇಜಸ್ ಸರಿಪಡಿಸಬಹುದು. ಟೂರಿಸ್ಟ್ ಸರ್ವಿಸ್ ಒದಗಿಸಿಕೊಟ್ಟರೆ ಹೆಚ್ಚು ಲಾಭ ಬರುವ ನಿರೀಕ್ಷೆಯಿದೆ. ಸರಕಾರದವರು ಟೂರಿಸ್ಟ್ ಬಸ್ ಸರ್ವಿಸ್ ಇರುವ ಪಕ್ಷದಲ್ಲಿ ಈ ಬಾಬಿನಿಂದ ಹೆಚ್ಚು ಉತ್ಪತ್ತಿ ಬರುವುದಕ್ಕೆ ಅವಕಾಶವಿದೆ.

ನಮ್ಮ ಸಂಸ್ಥಾನದಲ್ಲಿ ಅರಣ್ಯಸಂಪತ್ತು ವಿಶೇಷವಾಗಿದೆ. ಅದು ಪೋಲು ಆಗುವದನ್ನು ತಡೆಗಟ್ಟಬೇಕು. ಗಣಿ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ ಹೆಚ್ಚು ಉತ್ಪತ್ತಿ ಬರುತ್ತದೆ. ಕಬ್ಬಿಣದ ಅದರು ಹೆಚ್ಚಾಗಿ ದೊರೆಯುತ್ತದೆ. ಆದರೆ ಅದನ್ನು ಹೊರಗಡೆ ಕಳಿಸುವುದಕ್ಕೆ ಒಂದು ಸರಿಯಾದ ಬಂದರು ಇಲ್ಲ, ರೈಲ್ವೆ ಮಾರ್ಗವಿಲ್ಲ. ಆದುದರಿಂದ ಹೊಸ ರೈಲ್ವೆ ಮಾರ್ಗದ ಯೋಜನೆ ಮತ್ತು ಒಂದು ಪೋರ್ಟ್ ಆಗಬೇಕೆಂದು ನಾನು ಮುಖ್ಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಮಂಗಳೂರು ಬಂದರು ಸರ್ವಋತು ಬಂದರು ಮಾಡುವುದಕ್ಕೆ ಭಾರತ ಸರಕಾರ ಒಪ್ಪಿಕೊಂಡಿದೆ ಎಂದು ತಿಳಿದುಬಂದಿದೆ.

ಶ್ರೀ ಬಿ. ಡಿ. ಜತ್ತಿ.—. ಪರದೇಶಗಳಿಗೆ ಕಳಿಸುವ ಐರನ್ ಓರ್ ಪರಿಶುದ್ಧಮಾಡಿ ಪಿಗ್ ಐರನ್ ಮಾಡಿ ಕಳಿಸಬೇಕೆಂಬ ವಿಚಾರವಿದೆ.

ಶ್ರೀ ಬಿ. ರಾಚಯ್ಯ.—ಯಾವುದರಿಂದ ನಮ್ಮ ದೇಶದ ಆದಾಯ ಹೆಚ್ಚಿಗೆ ಆಗುತ್ತದೆಯೋ ಅದನ್ನು ಮಾಡಬೇಕಾದುದು ಅಗತ್ಯ ಎಂದು ನನ್ನ ಅಭಿಪ್ರಾಯ ತಿಳಿಸಿದ್ದೇನೆ. ಇದಕ್ಕಾಗಿ ಬಂದರುಗಳ ಅಭಿವೃದ್ಧಿ ಪಡಿಸಬೇಕಾಗಿದೆ. ಇದರಿಂದ ಗಣಿಸಂಪತ್ತಿನಿಂದ ಉತ್ಪತ್ತಿ ಹೆಚ್ಚಾಗುತ್ತವೆ. ಇದಕ್ಕೆ ಅನುಕೂಲವಾಗುವ ಹಾಗೆ ಹೊಸ ರೈಲ್ವೆ ಮಾರ್ಗ ರಚನೆಯಾಗಬೇಕು. ಕೇಂದ್ರ ಸರಕಾರದ ಫೈನಾನ್ಸ್ ಕಮಿಷನ್ ಮುಂದೆ ನಮ್ಮ ಮೈಸೂರು ರಾಜ್ಯದ ಬೇಡಿಕೆಗಳನ್ನು ಸರಿಯಾಗಿ ಮಂಡಿಸಬೇಕು. ಯಾಕೆಂದರೆ ಕಳೆದ ಹತ್ತಾರು ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಯಾವ ಹೊಸ ರೈಲ್ವೆ ಮಾರ್ಗವು ರಚನೆಯಾಗಿಲ್ಲ. ಖನಿಜ ಸಂಪತ್ತನ್ನು ಉಪಯೋಗಿಸಿ ರಾಜ್ಯದ ಆದಾಯವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಹೊಸ ರಾಜ್ಯದಲ್ಲಿ ಬೇರೆ ಬೇರೆ ಐದು ಪ್ರದೇಶಗಳಿಂದ ಬಂದಿರುವ ಭಾಗಗಳನ್ನು ಉತ್ತಮಪಡಿಸಲು ಕೇಂದ್ರ ಸರಕಾರದ ಸಹಾಯ ಪಡೆಯಬೇಕು. ಕೇಂದ್ರ ಸರಕಾರದ ಸಹಾಯದಿಂದ ನಮ್ಮ ಹಣಕಾಸಿನ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಉತ್ತಮವಾಗುತ್ತದೆ. ಈ ವಿಚಾರದಲ್ಲಿ ಹಣಕಾಸಿನ ಸಚಿವರಿಗೆ ದಿನೇ ದಿನೇ ಕಾತರತೆ ಹೆಚ್ಚಾಗುತ್ತಿದೆ. ಆದರೂ ಕೂಡ ಅವರು ''we need not bealarmed'' ಎಂದು ಹೇಳಿದಾರೆ.

ನಾವು ಯೋಜನೆಗಳ ಮುಖಾಂತರ ಇಟ್ಟುಕೊಂಡಿರತಕ್ಕ Development activities ಏನಿವೆ assets build up ಮಾಡುವುದು, ಅವನ್ನು ಶ್ರೀ ಮಾರ್ಕ ಮಲ್ಲಾರಾಧ್ಯರು ತಿಳಿಸಿದರು. ಕೆಲವು

(ಶ್ರೀ ಬಿ. ರಾಚಯ್ಯ)

ಸರ್ವಿಸಸ್‌ನಲ್ಲಿ, ರಸ್ತೆಗಳನ್ನು ರಿಪೇರಿ ಮಾಡುವುದರಲ್ಲಿ ಉತ್ಪತ್ತಿ ಬರುತ್ತದೆಯೇ? ಅವು assets ಆಗುತ್ತವೆಯೇ ಎಂದು ತಿಳಿಸಿದರು. ಉತ್ತಮವಾದ ರಸ್ತೆಗಳನ್ನಾಗಿ ಪರಿವರ್ತಿಸಿದರೆ ಅದರಲ್ಲಿ ಓಡಾಡತಕ್ಕ ವಾಹನಗಳಿಂದ ಬರುವ ತೆರಿಗೆಗಳು ಮತ್ತು ಇತರ ತೆರಿಗೆಗಳು ಸರ್ಕಾರಕ್ಕೆ ಬರುವುದಕ್ಕೆ ಅವಕಾಶವಿದೆ. ಅದ್ದರಿಂದ ಅದೂಕೂಡ ಒಂದು asset ಎಂದು ಭಾವಿಸುವುದಕ್ಕಾಗುವುದಿಲ್ಲವೇ ಎಂದು ಸ್ವಲ್ಪ ಅನುಭವಶಾಲಿಗಳಾದ ಅವರನ್ನು ಕೇಳಬೇಕೆಂದಿದ್ದೇನೆ.

ಅದೇ ರೀತಿಯಲ್ಲಿ ಪಬ್ಲಿಕ್ ಸೆಕ್ಟಾರ್ ಮತ್ತು ಪ್ರೈವೇಟ್ ಸೆಕ್ಟಾರ್‌ಗಳನ್ನು ತೆಗೆದುಕೊಂಡರೆ ಕೈಗಾರಿಕೆಗಳಿಗೆ ಪ್ರೈವೇಟ್ ಸೆಕ್ಟಾರಿನಲ್ಲಿ ಹೆಚ್ಚು ಪ್ರೋತ್ಸಾಹ ಕೊಡುತ್ತಿಲ್ಲ. ಪಬ್ಲಿಕ್ ಸೆಕ್ಟಾರು ಗಳನ್ನು ಜಾಸ್ತಿ ಮಾಡುತ್ತಿದ್ದಾರೆ. ಅದರಲ್ಲಿಯೂ ಕೂಡ ಹೊರಗಡೆಯ ಪ್ರಾಂತದಿಂದ ಬಂದಿರುವವ ರಿಗೆ ಹೆಚ್ಚು ಕೊಡುತ್ತಿದ್ದಾರೆಂದು ಹೇಳಿದರು. ನಮ್ಮ ದೇಶದಲ್ಲಿ......

ಶ್ರೀ ಜೆ. ಬಿ. ಮಲ್ಲಾರಾಧ್ಯ —ಪಬ್ಲಿಕ್ ಸೆಕ್ಟಾರ್‌ಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಾರೆಂದು ಹೇಳಲಿಲ್ಲ. ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದೇನೆ.

ಶ್ರೀ ಬಿ. ರಾಚಯ್ಯ.—ನಾವು ಒಪ್ಪಿಕೊಂಡಿರುವ ತತ್ವದ ಪ್ರಕಾರ ಸಮಾತಾವಾದ ಸಮಾಜ ವನ್ನು ಸ್ಥಾಪನೆ ಮಾಡಬೇಕೆಂದು ಹೇಳುವಾಗ—ವಿರೋಧಪಕ್ಷದವರು ಕೂಡ ನಮಗಿಂತ ಈ ವಿಷಯ ದಲ್ಲಿ ಮುಂದಾಗಿದ್ದಾರೆಂದು ಭಾವಿಸಿಕೊಂಡಿದ್ದೇನೆ—ಪಬ್ಲಿಕ್ ಸೆಕ್ಟಾರಿನಲ್ಲಿ ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಕೆಲಸಕಾರ್ಯಗಳು ನಡೆಯದೆ ಇದ್ದರೆ, ಪೂಜಾರಿ ಕೆಟ್ಟವನು ಎಂದು ದೇವಸ್ಥಾನದ ಬಾಗಿಲನ್ನು ಮುಚ್ಚಿದಹಾಗೆ ಆಗುತ್ತದೆ. ಈ ದೃಷ್ಟಿಯಿಂದ ಪಬ್ಲಿಕ್ ಸೆಕ್ಟಾರನ್ನು ಸಾಧ್ಯವಾದಮಟ್ಟಿಗೂ ಹೆಚ್ಚು ಹೆಚ್ಚು ಮಾಡುವುದರಿಂದ ಹಣ ಒಂದೇ ಕಡೆ ಕೇಂದ್ರೀಕೃತವಾಗು ವುದಕ್ಕೆ ಬದಲಾಗಿ ವಿಕೇಂದ್ರೀಕೃತವಾಗುವುದಕ್ಕೆ ಅವಕಾಶವಾಗುತ್ತದೆ, ಮತ್ತು ಎಲ್ಲ ಜನರ ಹಿತ ವನ್ನೂ ಕಾಪಾಡಿದಹಾಗೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಒಂದು ವೇಳೆ, ಮೈಸೂರು ಸಂಸ್ಥಾನದಲ್ಲಿ ಐಶ್ವರ್ಯವಂತರಾಗಿರುವವರು ಮುಂದೆ ಬಂದು ಜಾಯಿಂಟ್ ಸ್ಟಾಕ್ ಬೇಸಿಸ್‌ಮೇಲೆ ಕಂಪೆನಿಗಳನ್ನು ಮಾಡಿ, ಕಾರ್ಖಾನೆಗಳನ್ನು ಸ್ಥಾಪನೆಮಾಡಿ ಉತ್ಪತ್ತಿ ಮಾಡಬೇಕೆಂದು ಹೇಳುವಾಗ ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗದೆ ಅಂಥ ಜನರಿಗೆ ಪ್ರೋತ್ಸಾಹ ಕೊಡುವುದು ಸಾಧುವಾಗಿದೆ ಎಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ. ಪಬ್ಲಿಕ್ ಸೆಕ್ಟಾರಿನಲ್ಲಿ ಮೊದಮೊದಲು ಅನೇಕ ರೀತಿಯ ಲೋಪದೋಷಗಳು ಬರುತ್ತವೆ. ಅಂದ ಮಾತ್ರಕ್ಕೇ ಟೀಕೆ ಮಾಡುವುದು ಸರಿಯಲ್ಲ.

ನಾವು ಹಾಕಿಕೊಂಡಿರತಕ್ಕ ಎಲ್ಲ ಯೋಜನೆಗಳ physical target ಸಾಧಿಸಿದರೆ ಸಾಲದು ನಾವು ಇಟ್ಟುಕೊಂಡಿರುವ ಗುರಿ ಸಾಧನೆಯಾಗಬೇಕಾಗಿದ್ದರೆ ಒಳ್ಳೆಯ ಅಡ್ಮಿನಿಸ್ಟ್ರೇಷನ್ ಬೇಕು. ಒಳ್ಳೆಯ ಆಡಳಿತ ಬೇಕಾದರೆ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ security of service, recruitment ಮುಂತಾದುವೆಲ್ಲ ಸರಿಯಾದ ರೀತಿಯಲ್ಲಿ ನಡೆಯಬೇಕು. ಇದಕ್ಕೆ ಮೈಸೂರ್ ಪಬ್ಲಿಕ್ ಸರ್ವಿಸ್ ಕಮಿಷನ್ ಇದೆ. ಅದಕ್ಕೋಸ್ಕರ ಯಾವ ಯಾವ ರೀತಿಯಿಂದ ನಾನು ಸರ್ಕಾರದ ನೌಕರಿಗೆ ಜನರನ್ನು ನೇಮಿಸಿಕೊಳ್ಳಬೇಕೆಂದು ಕಾನೂನುಗಳನ್ನು ಮಾಡಿದ್ದಾರೆ. ಯಾವ ಯೂನಿಟ್ ಆಫೀಸರ್ ಕೈಯಲ್ಲಿ ಕೂಡ ಸರ್ಕಾರಿ ನೌಕರರನ್ನು ನೇಮಕ ಮಾಡುವ ಅಧಿಕಾರವಿರಕೂಡದು. ಕೆಳದರ್ಜೆ ನೌಕರರನ್ನು ನೇಮಿಸುವ ಅಧಿಕಾರ ಸಹ ಇರಕೂಡದು. ಎಲ್ಲ ಪಬ್ಲಿಕ್ ಸರ್ವಿಸ್ ಕಮಿಷನ್ ಕಡೆಗೆ ಹೋಗಬೇಕು, ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಜಾಸ್ತಿ ಕೆಲಸವಿದೆ, ಬೇಗ ಬೇಗ ನೌಕರರನ್ನು ನೇಮಕ ಮಾಡುವುದಕ್ಕಾಗುವುದಿಲ್ಲವೆಂದು ಸರ್ಕಾರದ ಅಭಿಪ್ರಾಯವಿದ್ದರೆ ಅದರಲ್ಲಿನ ಮೆಂಬರು ಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಐದು ಭಾಗಗಳು ಮೈಸೂರಿನಲ್ಲಿ ಸೇರಿದ್ದರೂ ಕೂಡ ಮೂರು ಜನ ಮಾತ್ರ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಮೆಂಬರುಗಳಾಗಿದ್ದಾರೆ. ಇವರ ಸಂಖ್ಯೆ

ಯನ್ನು ಹೆಚ್ಚಿಸಿ ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಸರ್ಕಾರದಿಂದ ಏನಾದರೂ interference ಇದ್ದರೆ, ಅದು ತಪ್ಪುವಂತೆ ಮಾಡಬೇಕು. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಪೂರ್ಣ ಸ್ವಾತಂತ್ರ್ಯವಿರಬೇಕು. ಬಹಳ ಹಿಂದುಳಿದ ಮತ್ತು unrepresented communitiesಗೆ ಕೆಲವು ವರ್ಷಗಳಾದರೂ ಕೂಡ ಜನಸಂಖ್ಯೆಯ ಆಧಾರದ ಮೇಲೆ ನೌಕರಿಗಳನ್ನು ನಿಗದಿ ಮಾಡತಕ್ಕದು ಒಳ್ಳೆಯದು. ಹಾಗೆ ಮಾಡುವಾಗ ಹಿಂದುಳಿದ ಕೋಮಿನವರಿಗಾಗಲೀ, ನಿಮ್ನ ತರಗತಿಗಳವರಿಗಾಗಲೀ ಆಯಾ ಜನಾಂಗದ ಉಮೇದುವಾರರಲ್ಲಿ ಒಂದು Competitive examination ನಡೆಸಿ ಅದರ ಪೈಕಿ ಉತ್ತಮರಾಗಿರುವವರನ್ನು ನೇಮಿಸಿಕೊಂಡರೆ ನಿಜವಾಗಿಯೂ ನಮ್ಮ ಸರ್ಕಾರದ ಆಡಳಿತದಲ್ಲಿ ದಕ್ಷತೆ, ನಿಷ್ಠೆ, ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಹಿಂದುಳಿದ ಪಂಗಡದವರಿಗೆ ನಿಮ್ನತರಗತಿಯವರಿಗೆ ಪ್ರಾತಿನಿಧ್ಯ ಕೊಡುತ್ತೇವೆಂದು ದಕ್ಷತೆಯಿಲ್ಲದೆ ಇರುವವರನ್ನು ದಾಕ್ಷಿಣ್ಯಕ್ಕೆ ಒಳಗಾಗಿ ಅಥವಾ ಇನ್ನುಯಾವುದೇ ರೀತಿಯಿಂದಲಾದರೂ ನೇಮಿಸಿದರೆ ಹಿಂದುಳಿದ ಪಂಗಡದವರೆಲ್ಲ ದಕ್ಷತೆಯಿಲ್ಲದವರು ಎನ್ನುವ ಆಕ್ಷೇಪಣೆ ಬರುತ್ತದೆ. ಅವರವರಲ್ಲಿಯೇ Competitive examinations ನಡೆಸಿ ದಕ್ಷರಾದವರನ್ನು ನೇಮಿಸಿದರೆ ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಆಂಧ್ರ ಸರ್ಕಾರದವರು ಈಗಾಗಲೇ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಪರ್ಸೆಂಟ್ ನೌಕರಿಗಳನ್ನು ಹಿಂದುಳಿದ ಕೋಮಿನ ಮತ್ತು ನಿಮ್ನ ತರಗತಿಗಳವರಿಗೆ ಕೊಡಬೇಕೆಂದು ನಿಗದಿ ಮಾಡಿದ್ದಾರೆ. ಇನ್ನು ಎಷ್ಟು ವರ್ಷ ಇದೇ ರೀತಿಯಲ್ಲಿ ಹಿಂದುಳಿದವರಿಗೆ ಮತ್ತು ನಿಮ್ನ ತರಗತಿಯವರಿಗೆ ಈಗ ನಿರ್ಧಾರವಾಗಿರುವ percentage of appointments ಕೊಡಬಹುದು ಎಂದನ್ನುತ್ತದೆ, ಇನ್ನು ಹತ್ತಾರು ವರ್ಷ, ಇಪ್ಪತ್ತು ವರ್ಷ ಇದೇ ರೀತಿ ಕೊಟ್ಟರೂ ಅವರು ಅಗತ್ಯವಾದ ಪ್ರಮಾಣವನ್ನು ತಲುಪುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಕೆಲವು ಇಲಾಖೆಗಳಲ್ಲಾದರೂ ನಿಗದಿಯಾದ ಒಂದು ಪ್ರಮಾಣವನ್ನು ತಲುಪುವವರೆಗಾದರೂ ಮುಂದುವರೆದವರಿಗೆ ನೌಕರಿ ಕೊಡುವುದನ್ನು ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗಿಲ್ಲದೆಯಿದ್ದರೆ social disparity ಇದ್ದೇ ಇರುತ್ತದೆ. ಅದನ್ನು ಬೇಗ ತೆಗೆದುಹಾಕುವುದಕ್ಕಾಗುವುದಿಲ್ಲ. ರಾಜ್ಯಾಂಗದತ್ತವಾದ directive principles ಏನಿದೆ ಅದನ್ನೆಲ್ಲ ಸರ್ಕಾರ ಯೋಚನೆ ಮಾಡಿದರೆ ಈ ರೀತಿಯಾಗಿ ಎಲ್ಲಿಯವರೆಗೆ ಜಾತಿಯ ಆಧಾರದ ಮೇಲೆ ನಡೆಸಿಕೊಂಡು ಹೋಗಬೇಕಾಗುತ್ತದೆಂದು ಪ್ರಶ್ನೆ ಮಾಡುತ್ತಿದ್ದೇನೆ. ಈ ಎಲ್ಲ ದೃಷ್ಟಿಯಿಂದ ನಿಮ್ನ ತರಗತಿಯವರಿಗಾಗಲಿ, ಮತ್ತು ಹಿಂದುಳಿದ ಪಂಗಡದವರಿಗಾಗಲಿ, ಕೆಲವು ವರ್ಷವಾದರೂ ಅವರಿಗೆ ನಿಗದಿಯಾಗಿರತಕ್ಕ percentage of appointments ಸರ್ಕಾರದಲ್ಲಿ ದೊರೆಯುವವರೆಗೂ ಹೆಚ್ಚಿಗೆ ಪ್ರಾತಿನಿಧ್ಯವಿರುವವರನ್ನು ತಡೆಗಟ್ಟಿ ಹಿಂದುಳಿದವರಿಗೇ ಅವಕಾಶ ಮಾಡಿ ಕೊಟ್ಟರೆ ನ್ಯಾಯ ದೊರಕುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನೌಕರರಲ್ಲಿ ತೃಪ್ತಿ ಇರಬೇಕೆಂದು ಮೊದಲೇ ತಿಳಿಸಿದ್ದೇನೆ. ಇದಕ್ಕೆ recruitment policy ಸರಿಯಾಗಿರಬೇಕು, Inter-State Seniority List ಬೇಗ ಇತ್ಯರ್ಥ ಮಾಡಬೇಕು. ಅಲ್ಲದೆ Security of Services ಇರಬೇಕು. Frequent transfers ಇರಬಾರದು. ಒಂದು ಕಡೆಗೆ ವರ್ಗಮಾಡಿದ ಮೇಲೆ ಎರಡು-ಮೂರು ವರ್ಷದ ವರೆಗಾದರೂ ಒಂದುಕಡೆ ಇರುತ್ತಾನೆಂಬ ಗ್ಯಾರೆಂಟಿ ಇದ್ದರೆ, ನಿಷ್ಪೃಹತೆಯಿಂದ ದುಡಿಯತಕ್ಕ ಮನೋಭಾವ ಅಧಿಕಾರಿಗಳಲ್ಲಿ ಬೆಳೆಯುತ್ತದೆ. ಆರು ತಿಂಗಳಿಗೆ, ಮೂರು ತಿಂಗಳಿಗೆ ಬದಲಾವಣೆ ಮಾಡುತ್ತಾ ಬಂದರೆ ಏನೂ ಪ್ರಯೋಜನವಿಲ್ಲ. ಒಬ್ಬರ ಮೇಲೆ ದೂರುಗಳು ಬಂದುವು ಎಂದು ಅವನನ್ನು ವರ್ಗಮಾಡಿದರೆ, ಇನ್ನೊಂದು ಕಡೆ ಅವನು ಅದೇ ರೀತಿ ನಡೆದುಕೊಂಡರೆ ಅಲ್ಲಿಯವರಿಗೆ ತೊಂದರೆ ಇದ್ದೇ ಇರುತ್ತದೆ. ಈ ದೃಷ್ಟಿಯಿಂದ ನಿಷ್ಪೃಹತೆಯಿಲ್ಲದೆ ಇರುವವರು ಕೆಲವುಕಾಲ ಅದೇ ಸ್ಥಳದಲ್ಲಿದ್ದರೆ ಅಂಥವರ ತಪ್ಪುಗಳನ್ನು

(ಶ್ರೀ ಬಿ. ರಾಚಯ್ಯ)

ಕಂಡುಹಿಡಿದು ಅದಕ್ಕೆ ತಕ್ಕಶಿಕ್ಷೆಯನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಅದಿಲ್ಲದೆ ದೂರುಗಳು ಬಂದುವೆಂದು ಬೇರೆ ಕಡೆಗೆ ವರ್ಗಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಕೊನೆಯ ಪಕ್ಷ ಒಬ್ಬರು ಎರಡು ವರ್ಷವಾದರೂ ಇರಬೇಕು, ಮತ್ತು ಆಯಾ ಸ್ಥಳದಲ್ಲಿಯೇ ದಾಕ್ಷಿಣ್ಯವಿಲ್ಲದೆ ಸರ್ಕಾರದಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿರಬೇಕು. Security of Services ನೌಕರರಿಗೆ ಒದಗಿಸಿಕೊಡಬೇಕು.

9–00 A.M.

ಇನ್ನು ನಾನ್‌ಗೆಜೆಟೆಡ್ ಅಧಿಕಾರಿಗಳಿಗೆ ಹೆಚ್ಚಿನ ರೀತಿಯಲ್ಲಿ ಸಂಬಳಸಾರಿಗೆಗಳು ಸಿಕ್ಕು ತ್ತಿಲ್ಲವೆಂದು, ಈ ದೃಷ್ಟಿಯಿಂದ ಅತೃಪ್ತಿ ಹೆಚ್ಚುತ್ತಿದೆ. ಇದರಿಂದ ಲಂಚಕೋರತನ ಉಂಟಾಗು ತ್ತದೆ ಎಂದು ಹೇಳುತ್ತಲೇ ಇದ್ದುದನ್ನು ನೋಡಿ ಕಳೆದ 57ನೇ ಸಾಲಿನಲ್ಲಿ ಸರಕಾರದ ಆರ್ಥಿಕ ಸ್ಥಿತಿಗೆ ಅನುಸಾರವಾಗಿ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿ ಸಂಬಳ-ಸಾರಿಗೆಗಳನ್ನು ಕೊಡಲು ಸುಮಾರು ಮೂರೂವರೆ ಕೋಟಿಯಷ್ಟು ವೆಚ್ಚಮಾಡಿ, ಈಗ ಪುನಃ ವಿಮರ್ಶೆ ಮಾಡಲು ಸ್ವಲ್ಪ ಎಂದರೆ ಸುಮಾರು ಎಂಟು-ಒಂಬತ್ತು ಕೋಟಿ ರೂಪಾಯಿಗಳಷ್ಟು ಸಂಬಳ-ಸಾರಿಗೆಗಳನ್ನು ಪುನ ರ್ವಿಮರ್ಶಿಸಿ ಆರ್ಥಿಕ ಪರಿಸ್ಥಿತಿಯನ್ನು ಪುನರ್ವಿಮರ್ಶಿಸಿ ಆರ್ಥಿಕಸ್ಥಿತಿಯು ಉತ್ತಮವಾಗುವ ರೀತಿಯಲ್ಲಿ ಸರಕಾರ ಪ್ರಯತ್ನ ಮಾಡಿಕೊಟ್ಟಿದೆ. ಆದರೆ ಇದರಲ್ಲಿ ಹೊಸಧಾಗಿ ಸರ್ವಿಸ್ಸಿಗೆ ಸೇರಿದವರಿಗೆ ಮಾತ್ರ ಅನುಕೂಲವಿದೆ. ಹೆಚ್ಚಿಗೆ ಸರ್ವಿಸ್ಸು ಮಾಡಿರುವ ನೌಕರರುಗಳು ಎಂದರೆ, ಸ್ಕೂಲು ಟೀಚರುಗಳೇ ಆಗಲೀ ಪೋಲೀಸ್ ಕಾನ್‌ಸ್ಟೇಬಲ್ಲೇ ಆಗಲಿ, ಅಥವಾ ಇನ್ನಿತರ ಕೆಳ ದರ್ಜೆಯ ನೌಕರರೇ ಆಗಲಿ, 10–20 ವರ್ಷಗಳ ಸರ್ವಿಸ್ಸಾದವರಿಗೆ ಒಂದೆರಡು ವೈಟೇಜ್ ಇಂಕ್ರಿ ಮೆಂಟನ್ನಾದರೂ ಕೊಟ್ಟಿದ್ದರೆ ಇವರುಗಳಿಗೆ ತೃಪ್ತಿ ಉಂಟಾಗುತ್ತಿತ್ತೋ ಏನೋ ಎಂದು ನನಗೆ ಕಾಣುತ್ತೆ. ನಾವು ಇನ್ನೂ ಎಷ್ಟು ಹೆಚ್ಚು ಸಂಬಳ-ಸಾರಿಗೆ ಕೊಡಲಿ, ಇವರಲ್ಲಿ ಅತೃಪ್ತಿ ಇದ್ದೇ ಇರುತ್ತದೆ. ಈ ನೌಕರ ವರ್ಗದವರು ಹಳ್ಳಿಗಾಡಿನಲ್ಲಿರುವ ಲಕ್ಷಾಂತರ ಜನರ ಕಡೆಗೆ ಲಕ್ಷ್ಯ ಕೊಟ್ಟಿಲ್ಲ. ಅವರ ಜೀವನವನ್ನು ಇವರು ಹೋಲಿಸಿಕೊಂಡ ಪಕ್ಷದಲ್ಲಿ ಇವರ ಜೀವನವು ಅವರ ಜೀವನಕ್ಕಿಂತ ಎಷ್ಟೋ ಉತ್ತಮವಾಗಿದೆ ಎನ್ನುವುದು ತಿಳಿಯುತ್ತದೆ. ಈ ದೃಷ್ಟಿಯಿಂದ ನಮ್ಮ ನೌಕರರು ತೃಪ್ತಿಪಟ್ಟುಕೊಂಡು ದೇಶಭಕ್ತಿಯಿಂದ ಕೆಲಸ ಮಾಡಬೇಕು ಎಂದು ಈ ಸಂದರ್ಭ ದಲ್ಲಿ ಅವರನ್ನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಕೋ-ಆಪರೇಟಿವ್ ಬೇಸಿಸ್‌ಮೇಲೆ ಭೂಮಿಯನ್ನು ಬಡ ರೈತರಿಗೆ ಹಂಚುವಂತೆ ಏರ್ಪಾಡು ಮಾಡಬೇಕು ಎನ್ನುವುದು ಈ ಕಾಂಗ್ರೆಸ್ಸಿನ ನೀತಿಯಾಗಿದೆ. ಈ ರೀತಿ ಮಾಡ ಬೇಕಾಗಿದ್ದರೆ, ಮೊದಲು ಸರಕಾರದಲ್ಲಿರುವ ಜಮೀನನ್ನು ಸಹಕಾರ ತತ್ವದ ಮೇಲೆ ವ್ಯವಸಾಯ ಮಾಡುವವರಿಗೆ ಕೊಟ್ಟು ಅವರಿಗೆ ಬೇಕಾದ ವ್ಯವಸಾಯದ ಉಪಕರಣಗಳನ್ನೂ ಎತ್ತು, ಇತ್ಯಾದಿ ಗಳನ್ನು ಒದಗಿಸಿ ಕೊಟ್ಟು ಸಹಾಯ ಮಾಡಬೇಕು. ಈ ರೀತಿಯಾಗಿ ಮಾಡಿದರೆ Co-operative Farming ಯಶಸ್ವಿಯಾಗುವಂತೆ ಮಾಡಬಹುದು. ಇನ್ನು ಲ್ಯಾಂಡ್ ರಿಫಾರಂಸ್ ಬಿಲ್ಲು ಬಂದ ಮೇಲೆ ಕೆಲವು ಕಡೆ ಜನರೆಲ್ಲಾ ಸೇರಿ ಕೋ-ಆಪರೇಟಿವ್ ಫಾರ್ಮಿಂಗ್ ರೀತಿಯಲ್ಲಿ ವ್ಯವ ಸಾಯ ಮಾಡಿಕೊಳ್ಳಬಹುದು. ಇದರಂತೆ ಮಾಡಿಕೊಳ್ಳಲು ಸರಿಯಾದ ಸಹಕಾರ-ಸಾಕರ್ಯ ಗಳನ್ನು ಸರಕಾರ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಇಲಾಖೆಯಲ್ಲಿ. ಮುಂದಿನ ವರ್ಷದಿಂದ ಕಡ್ಡಾಯಶಿಕ್ಷಣವನ್ನು ಮೈಸೂರು ಸಂಸ್ಥಾನದಾದ್ಯಂತ ತರಬೇತಾಗಿದೆ ಎಂದು ನಿರ್ಧಾರವಾಗಿದೆ, ಇದರಂತೆ ನಡೆಸಿ ಕೊಂಡು ಹೋಗಲು ಸ್ವಲ್ಪ ಕಷ್ಟವಾಗುತ್ತದೆ. ಸ್ಕೂಲು ಕಟ್ಟಡಗಳು ಇಲ್ಲದೆ ಇರುವುದು. ಆದರೂ ಕೂಡ ಅವರು ಮಾಡಿರುವ ಪ್ರಯತ್ನ ಹಿಂದೆಯೇ ಆಗಬೇಕಾಗಿತ್ತು, ಈಗಲಾದರೂ ಬಂದೀತು. ಇದಕ್ಕೋಸ್ಕರ ಎಲ್ಲರೂ ಸಂತೋಷಪಡಬೇಕಾಗಿದೆ. ಹೀಗೆ ಮಾಡುವಾಗ ಅನೇಕ

ಕಡೆ ವಿದ್ಯಾರ್ಥಿಗಳಿಗೆ ವಿಶೇಷವಾದ ಅನುಕೂಲವನ್ನು ಮಾಡಿ ತೋರಿಸಿದ್ದಾರೆ. ಅದು 1,200 ರೂಪಾಯಿಗಳಷ್ಟು ಉತ್ಪತ್ತಿ ಬರತಕ್ಕ ಎಲ್ಲ ತಂದೆ ತಾಯಿಗಳ ಮಕ್ಕಳಿಗೂ ಈ ತರದ ಕನ್ಸೆಷನ್ನುಗಳನ್ನು ಕೊಟ್ಟಿರುವುದು. ಇದೇನೋ ಕೊಡುವುದು ಸಾಧುವಾದುದು. ಆದರೆ, ಇದರ ಜೊತೆಯಲ್ಲಿ ಹತ್ತಾರು ವರ್ಷಗಳಿಂದ ಸರಕಾರದವರು ನಿಮ್ನ ತರಗತಿಯವರಿಗೆ ವಿದ್ಯಾಭ್ಯಾಸಕ್ಕಾಗಿ ಕೊಡುವ ಫೀಸನ್ನು ಎಕ್ಸಂಪ್ಷನ್ ಮಾಡಿದಂತೆ ಈಗ ಮಾಡಿಲ್ಲ. ಮೈಸೂರು ಸರಕಾರ ಹಾಗಿರಲಿ. ಎಲ್ಲಾ ರಾಜ್ಯಗಳ ಲೆಜಿಸ್ಲೇಚರುಗಳಲ್ಲಿಯೂ, ಪಾರ್ಲಿಮೆಂಟಿನಲ್ಲಿಯೂ, ಇಲ್ಲಿಯವರೆಗೂ ಈ ವರ್ಗದವರಿಗೆ ಒಂದು ರಿಸರ್ವೇಷನ್ನನ್ನು ಕೊಟ್ಟಿದ್ದರು. ಹೀಗಿರುವಾಗ ಇಗಲೂ ಸಹ ಈ ನಿಮ್ನ ತರಗತಿಯ ವಿದ್ಯಾರ್ಥಿಗಳಿಗಾಗಿ ಫೀಜುಗಳಲ್ಲಿ ವಿನಾಯತಿ ಕೊಡುವುದನ್ನು ಇನ್ನೂ ಹಾಗೇ ಮುಂದುವರಿಸಿಕೊಂಡು ಬರಬೇಕು ಎಂದು ನಾನು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಜನರಲ್ ಹಾಸ್ಟಲುಗಳು ಮತ್ತು ಹಿಂದುಳಿದವರಿಗಾಗಿ ಹಾಸ್ಟಲುಗಳನ್ನು ತೆರೆದು ವಿದ್ಯಾರ್ಥಿಗಳಿಗೆ ಸೌಕರ್ಯವನ್ನು ಒದಗಿಸುತ್ತಿದ್ದಾರೆ. ಇದರಲ್ಲಿ ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ಪೂರ್ಣವಾಗಿ ಮನೆಗಳನ್ನು ಕಟ್ಟುವುದಕ್ಕೆ, ಮತ್ತು ಇತರ Economic Aids ಗಳನ್ನು ಕೊಡುವುದರ ಕಡೆಗೆ ಈಗ ಹೆಚ್ಚಿಗೆ ಗಮನ ಕೊಡದೆ, ವಿದ್ಯಾಭ್ಯಾಸ ಈ ಹಿಂದುಳಿದ ಜನಕ್ಕೆ ಹೆಚ್ಚಾಗಲಿ ಎನ್ನುವ ದೃಷ್ಟಿಯಿಂದ ಈ ಜನರ ಶಿಕ್ಷಣದ ಕಡೆಗೆ ಹೆಚ್ಚಿಗೆ ವೆಚ್ಚ ಮಾಡುತ್ತಿದ್ದಾರೆ. ಆದರೆ ಈ ಸೋಷಿಯಲ್ ವೆಲ್‌ಫೇರು ಎನ್ನುವ Head ನ 37 Education ನಲ್ಲಿ ಜನರಲ್ ಹಾಸ್ಟಲ್ ಸ್ಕೀಮ್‌ಗಳಿಗಾಗಿ ಹೆಚ್ಚು ಹೆಚ್ಚಾಗಿ ಪ್ರೋತ್ಸಾಹ ಕೊಡುತ್ತಿರುವಾಗ ಇದರಲ್ಲಿ ಪ್ರತ್ಯೇಕವಾಗಿ ಯಾವ ಉದ್ದೇಶಕ್ಕಾಗಿ ಹಣವನ್ನಿಟ್ಟಿದ್ದಾರೆಂದು ನಾನು ನೋಡಲಿಲ್ಲ. ಈ ಕಡೆ ಬದಲಾವಣೆ ಮಾಡಿ ಹಾಕಿರುವುದಕ್ಕೆ ಬಹುಶಃ ಈ ಜನರಲ್ ಎಜುಕೇಷನ್ನಿಗಾಗಿ ಶೇಕಡ 25ರಷ್ಟನ್ನು ಲೋಕಲ್ ಕಾಂಟ್ರಿಬ್ಯೂಷನ್ನು ಬಾರದೆ ಇರುವುದರಿದ ಈ ಹಿಂದುಳಿದವರ ವಿದ್ಯಾಭ್ಯಾಸಕಾಗಿ ಅಲ್ಲಿ ಕೊಟ್ಟಿದ್ದಾರೆಂದು ನನಗೆ ತೋರುತ್ತೆ. ಇದಕ್ಕೋಸ್ಕರ ಮಾನ್ಯ ಮಂತ್ರಿಗಳು ನಮ್ಮವರಾಗಿರುವುದರಿಂದ ಅವರು ಕ್ಯಾಬಿನೆಟ್ಟಿನಲ್ಲಿ ತಮ್ಮ ಶಕ್ತಿಯನ್ನುಪಯೋಗಿಸಿ ಈ ಹಿಂದುಳಿದ ಜನಗಳಿಗಾಗಿ "without expecting contribution from the local people" ಸರಕಾರದವರೇ ಸೆಂಟ್ ಪರ್ಸೆಂಟ್ ಗ್ರಾಂಟನ್ನು ಈ ಹರಿಜನರಿಗಾಗಿ ಕೊಡಬೇಕೆಂದು ಸೂಚನೆ ಮಾಡುತ್ತೇನೆ. ಜನರಲ್ ಎಜುಕೇಷನ್ನಿನಲ್ಲಿ ಶೇಕಡಾ ಹತ್ತರಷ್ಟು ಎಂದು ಕೊಟ್ಟು ಜನರಲ್ ಹಾಸ್ಟಲನಲ್ಲಿ ಹಿಂದುಳಿದವರು ಇದ್ದರೆ ಅವರ ವಿದ್ಯಾಭ್ಯಾಸಕ್ಕಾಗಿ ಏನು ಕನ್ಸೆಷನ್ನುಗಳು ಇರುತ್ತವೆಯೋ ಅವೆಲ್ಲ ಅಲ್ಲಿನ ಮ್ಯಾನೇಜುಮೆಂಟಿಗೆ ಹೋಗುತ್ತವೆ. ಆದರಿಂದ ಅಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ವಿದ್ಯಾರ್ಥಿಗಳನ್ನು ಸೇರಿಸುವುದಕ್ಕೂ ಅವಕಾಶವಾಗುತ್ತದೆ. ಅಲ್ಲದೆ ಬೇರೆ ಕೋಮಿನ ವಿದ್ಯಾರ್ಥಿಗಳು ನಿಮ್ನ ವರ್ಗದ ಹಾಸ್ಟಲುಗಳಲ್ಲಿ ಕಲೆತು ಅವರ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಲು ಬಂದರೂ ಅವರಿಗೂ ಸಹಾಯ ಮಾಡಬಹುದು.

SRI D. DEVARAJ URS.—I want to know the opinion of the Hon'ble Member abo t General Hostels. In the name of General Hostels, they perpetuate Communalisim. Just to get aid, they do this but perpetuate communalism. I want to know your opinion.

ಶ್ರೀ ಬಿ. ರಾಚಯ್ಯ.—ನನ್ನ ಅಭಿಪ್ರಾಯವನ್ನು ಕಳೆದೆರಡು ವರ್ಷಗಳ ಬಡ್ಜೆಟ್ಟು ಸೆಷನ್ನಿನಿಂದಲೂ ಹೇಳುತ್ತಲೇ ಬಂದಿದ್ದಾರೆ. ಹಿಂದೆ ಶ್ರೀಮಾನ್ ಸಿ. ಆರ್. ರೆಡ್ಡಿಯವರು ಮೈಸೂರು ಸಂಸ್ಥಾನದ D.P.I ಆಗಿದ್ದಾಗ—1909-13 ರಲ್ಲೋ—ಏನೋ ಒಂದು ಸಾರಿ ಅವರು ಕೆಲವು ನ್ಯಾಷನಲ್ ಇನ್‌ಸ್ಟಿಟ್ಯೂಷನ್ನುಗಳು ಷುರುವಾಗಿದೆ ಎಂದರು. ಅವರು ಹೇಳುವಾಗ "They were national in out-look but they were communal core" ಎನ್ನುವುದನ್ನೇ

(ಶ್ರೀ ಬಿ. ರಾಚಯ್ಯ)

ಹೇಳಿದರು. ಈಗ ಹಾಸ್ಟಲುಗಳ ಮ್ಯಾನೇಜ್‌ಮೆಂಟಿನವರು ಶೇಕಡಾ 80 ರಷ್ಟು ವಿದ್ಯಾರ್ಥಿಗಳನ್ನು ಇಟ್ಟುಕೊಳ್ಳಲು ಅವಕಾಶವಿದೆ. ಇನ್ನೂ ಇಪ್ಪತ್ತು ಭಾಗದಷ್ಟು ಬೇರೆ ವಿದ್ಯಾರ್ಥಿಗಳಿಗೂ ಕೊಡಲು ಅವಕಾಶವಿದೆ. ಜನರಲ್ ಹಾಸ್ಟಲುಗಳಲ್ಲಿ ಶೇಕಡಾ 90 ರಷ್ಟು, ಮಿಕ್ಕವರು ಹಿಂದುಳಿದವರು ಶೇಕಡಾ ಹತ್ತು ಭಾಗ ಎಂದಿರುವುದಕ್ಕೆ ಬದಲು ಸರಕಾರದವರೇ ವಹಿಸಿಕೊಂಡು ಎಲ್ಲ ಷೆಡ್ಯೂಲ್ ಕ್ಯಾಸ್ಟು ಹಾಸ್ಟೆಲ್ಲುಗಳನ್ನೂ ಜನರಲ್ ಹಾಸ್ಟಲ್ಲುಗಳಾಗಿ ಬೇಕಾದರೂ ಮಾಡಿ ಎಂದು ಹೇಳುತ್ತೇನೆ. ಈಗ ಜಾತ್ಯಾತೀತ ರಾಜ್ಯವಾಗಬೇಕು ಎಂದು ಹೇಳುವಾಗ ವಿದ್ಯಾಭ್ಯಾಸಕ್ಕಾಗಿ ಸರಕಾರದವರು ಈ ಅವಕಾಶವನ್ನು ಮಾಡಿಕೊಟ್ಟರೂ ಬಹಳ ಸಂತೋಷ. ಈ ದೃಷ್ಟಿಯಿಂದ ಹಿಂದುಳಿದ ಈ ಜನಕ್ಕಾಗಿ ಹೆಚ್ಚು ಹೆಚ್ಚಾಗಿ ಸರಕಾರ ಪ್ರೋತ್ಸಾಹ ಕೊಡಬೇಕು. ಹರಿಜನರಿಗಾಗಿ, ವಿದ್ಯಾಭ್ಯಾಸಕ್ಕಾಗಿ ಮತ್ತು ಇನ್ನಿತರ ಹಾಸ್ಟಲುಗಳಲ್ಲಿರುವ ಮ್ಯಾನೇಜ್‌ಮೆಂಟಿನ ಆಡಳಿತ ಸರಿಯಾಗಿರಬೇಕು. ಇದನ್ನು ಸೋಷಿಯಲ್ ವೆಲ್‌ಫೇರು ಇಲಾಖೆಯೇ ಆಗಲಿ, ತಮ್ಮಲ್ಲಿ ಎಷ್ಟು ವಿದ್ಯಾರ್ಥಿಗಳಿಗಾಗಿ ಎಷ್ಟು ಹಣ ಖರ್ಚಾಗಿದೆ, ಯಾವ ರೀತಿ ಲೆಕ್ಕಾಚಾರ ಇಟ್ಟಿದ್ದಾರೆನ್ನುವುದನ್ನು ತನಿಖೆ ಮಾಡಲು Inspection Authority ಇರಬೇಕು. ಇದರಿಂದ ಎಲ್ಲೆಲ್ಲಿ ಲೋಪದೋಷಗಳಿವೆ ಎನ್ನುವುದನ್ನು ತಿಳಿದುಕೊಂಡು ಇದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಿ ಎಲ್ಲ ಪ್ರದೇಶಗಳಿಗೂ ಹೋಗಿ ಅಲ್ಲಿರುವ ಹಾಸ್ಟಲುಗಳೆಲ್ಲಾ ಸರಿಯಾಗಿ ನಡೆಯುತ್ತಿವೆಯೇ, ಇಲ್ಲವೇ ಎನ್ನುವುದನ್ನೆಲ್ಲ ಪರಿಶೀಲನೆ ಮಾಡಲು ಅನುಕೂಲವಾಗುತ್ತದೆ. ಈ ರೀತಿ ಮಾಡುವುದು ಸೂಕ್ತವೆಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ. ಆದರೆ ಈ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ, ಸೋಪ್ ಫ್ಯಾಕ್ಟರಿ, ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್, ಎಲೆಕ್ಟ್ರಿಕ್ ಫ್ಯಾಕ್ಟರಿ, ರೆಂಕೋ, ಇತ್ಯಾದಿ ಫ್ಯಾಕ್ಟರಿಗಳಲ್ಲಿ ಹೆಚ್ಚಿನ ಉತ್ಪತ್ತಿಯನ್ನು ಮಾಡುವುದಕ್ಕೆ ಅವಕಾಶವಾಗಿದೆ. ಸ್ಯಾಂಡಲ್‌ವುಡ್ ಈಚೀಚೆಗೆ ವಿಶೇಷವಾಗಿ ಸ್ಮಗಲ್ ಆಗುತ್ತಿದೆ. ಅದನ್ನು ತಪ್ಪಿಸಬೇಕು. ಸರ್ಕಾರದವರು ಇದನ್ನು ನ್ಯಾಷನಲೈಸ್ ಮಾಡಬೇಕು. ಹಳೆಯ ಮೈಸೂರಿನಲ್ಲಿ ಅಲ್ಲದೆ ಬೇರೆ ಪ್ರಾಂತಗಳಲ್ಲಿ ಪ್ರೈವೇಟ್ ಏಜೆನ್ಸಿಗಳು ಸ್ಯಾಂಡಲ್‌ವುಡ್ಡನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಹಳೆಯ ಮೈಸೂರಿನಲ್ಲಿ ಸರ್ಕಾರದವರೇ ತೆಗೆದುಕೊಂಡು ಫ್ಯಾಕ್ಟರಿಗೆ ಕೊಡುವುದರಿಂದ ಸ್ಮಗಲ್ ಆಗುವುದಕ್ಕೆ ಅವಕಾಶವಿದೆ. ಆದ್ದರಿಂದ ಸರ್ಕಾರದವರೇ ಈ ಗಂಧದ ಮರದ ಫ್ಯಾಕ್ಟರಿ ಏಜೆನ್ಸಿಯನ್ನು ಇತರರಿಗೆ ಯಾರಿಗೂ ಕೊಡದೆ ತಾವೇ ಮನಾಪಲಿ ಮಾಡಿಕೊಂಡು ಆ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಬೇಕೆಂದು ನಾನು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಬೇರೆಯವರಿಗೆ ಈ ಏಜೆನ್ಸಿಯನ್ನು ತೆಗೆದುಕೊಳ್ಳುವುದಕ್ಕೆ ಖಂಡಿತವಾಗಿ ಅವಕಾಶವನ್ನು ಕೊಡಬಾರದು ಎಂದು ನಾನು ಸಲಹೆ ಮಾಡುತ್ತೇನೆ. ಶ್ರೀ ವರ್ಷಾ ಕಡಿದಾಳ್ ಮಂಜಪ್ಪನವರೂ ಸಹ ರೈತರ ಅಭಿವೃದ್ಧಿ ಬಗ್ಗೆ ಹೆಚ್ಚಿನ ಸಾಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ನಾನು ಹೇಳುತ್ತೇನೆ. ಇನ್ನು ಮುಂದೆ ನಮ್ಮ ಸರ್ಕಾರದವರು ಮಂಡಿಸತಕ್ಕ ಆಯುವ್ಯಯ ಅಂದಾಜು ಖೋತಾ ಬೀಳುವುದಿಲ್ಲವೆಂದು ನಾನು ದೃಢವಾದ ನಂಬಿಕೆಯಿಂದ ಹೇಳುತ್ತೇನೆ. ಈಗ ಆಗಿರತಕ್ಕ ಖೋತಾವನ್ನು ಸರಿದೂಗಿಸುವುದಕ್ಕೋಸ್ಕರ ಸರ್ಕಾರದವರು ಒಂದು ಹೊಸ ತೆರಿಗೆಯನ್ನು ಹಾಕಬೇಕೆಂದು ಉದ್ದೇಶಪಟ್ಟಿದ್ದಾರೆ. ಅದು ಲ್ಯಾಂಡ್ ರೆವಿನ್ಯೂ ಮೇಲೆ ಸರ್ ಛಾರ್ಜು ಹಾಕಬೇಕು ಎಂಬುದು. ಈಗ್ಗೆ ಹತ್ತಾರು ವರ್ಷಗಳಿಂದ ಸರ್ವೆ ಸೆಟಲ್‌ಮೆಂಟ್ ಕೆಲಸ ಮಾಡದೆ ಖುಷ್ಕಿಯನ್ನು ತರೀ ಮಾಡುವುದಕ್ಕೂ, ತರಿಯನ್ನು ಖುಷ್ಕಿ ಮಾಡುವುದಕ್ಕೂ, ಖುಷ್ಕಿ ಮತ್ತು ತರಿಯನ್ನು ಬಾಗಾಯಿತು ಮಾಡುವುದಕ್ಕೂ ಪ್ರಯತ್ನ ಮಾಡಿ ಸರ್ಕಾರಕ್ಕೆ ಅದರಿಂದ ಸಾಕಷ್ಟು ಉತ್ಪತ್ತಿಯಾಗದೆ ಎಷ್ಟೋ ಹಣ ಪೋಲಾಗುತ್ತಿದೆ. ಈ ದೃಷ್ಟಿಯಿಂದ ನಾಲ್ಕಾಣೆ ಇದ್ದುದ್ದು 2 ರೂಪಾಯಿಗಳವರೆಗೆ ಖುಷ್ಕಿ ಕಂದಾಯವಾಗಿದೆ. ನಾಲ್ಕು ರೂಪಾಯಿಗಳಿಂದ

10–12 ರೂಪಾಯಿಗಳವರೆಗೆ ತರೀ ಕಂದಾಯವಾಗಿರುತ್ತದೆ. ಹೀಗೆ ಬೇರೆ ಬೇರೆ ರೀತಿಯಲ್ಲಿ ಕಂದಾಯದ ವ್ಯವಸ್ಥೆ ಇರುವುದರಿಂದ ಇಡೀ ಸಂಸ್ಥಾನದಲ್ಲಿ ಸರ್ವೆ ಸೆಟಲ್‌ಮೆಂಟ್ ಪೂರ್ತಿ ಆಗುವುದು ನಮ್ಮ ಸರ್ಕಾರಕ್ಕೆ ಇನ್ನೂ ಹತ್ತಾರು ವರ್ಷಗಳಾದರೂ ಹಿಡಿಯಬಹುದು. ಈ ದೃಷ್ಟಿಯಿಂದ ಸರ್‌ಛಾರ್ಜನ್ನು ಸರ್ಕಾರದವರು ಹಾಕಿದರೆ ಆಗ ಅದರಿಂದ ಎರಡು ಕೋಟಿ ರೂಪಾಯಿಗಳ ಉತ್ಪತ್ತಿ ಆಗುವಂತೆ ಮಾಡಬಹುದು ಎಂದು ರೈತರ ತಲೆ ಮೇಲೆ ಭಾರಿ ಹೊರೆಯನ್ನು ಹಾಕುತ್ತಿದ್ದೀರಿ. ಇದರಿಂದ ರೈತರ ಬೆನ್ನುಮೂಳೆ ಮುರಿದಿದೆ. ಒಟ್ಟಿನಲ್ಲಿ ರೈತರಿಗೆ ಬೇಕಾದಷ್ಟು ಸಾಲಭ್ಯ ಒದಗಿಸಿಕೊಡದಿದ್ದರೆ ಆಗಲೇ ಸರ್ಕಾರದವರನ್ನು ಮತ್ತು ನಮ್ಮನ್ನು ರೈತರು ಬೈಯುತ್ತಾರೆ. ಈ ದೃಷ್ಟಿಯಿಂದ ಸರ್ವತೋಮುಖವಾದಂಥ ಅಭಿವೃದ್ಧಿಗಾಗಿ ನಮ್ಮ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಆದಷ್ಟು ಮಟ್ಟಿಗೆ ರೈತರಿಗೆ ಹೆಚ್ಚಿನ ಸಾಕರ್ಯಗಳನ್ನು ಕೊಡುವ ಧೈರ್ಯವನ್ನು ಸರ್ಕಾರದವರು ಈ ಕೂಡಲೇ ಮಾಡಬೇಕು. ವಿದ್ಯುಚ್ಛಕ್ತಿಯನ್ನು ಹೆಚ್ಚಿಗೆ ಉಪಯೋಗ ಮಾಡುವವರ ಮೇಲೆಯೂ ಮತ್ತು ಯಾರು ಕೈಗಾರಿಕೆ ಕ್ಷೇತ್ರಗಳಲ್ಲಿ ಹೆಚ್ಚಿನ ಉತ್ಪಾದನೆಯನ್ನು ಮಾಡುವವರ ಮೇಲೆಯೂ ಹೆಚ್ಚಿನ ತೆರಿಗೆಯನ್ನು ಹಾಕಬೇಕು ಎಂದು ನಮ್ಮ ಸರ್ಕಾರದವರು ಯೋಚಿಸಿದ್ದಾರೆ. ಅಲ್ಲದೆ ಟೌನಿನಲ್ಲಿರತಕ್ಕ ಹೆಚ್ಚು ಹೆಚ್ಚು ಸಂಪಾದನೆ ಮಾಡಿ ಜಾಸ್ತಿ ಆಸ್ತಿಯನ್ನು ಹೊಂದಿದವರ ಮೇಲೆ ಆಸ್ತಿ ತೆರಿಗೆಯನ್ನು ಹಾಕಬೇಕೆಂಬ ಮಾರ್ಗವನ್ನು ನಮ್ಮ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಈ ಮಧ್ಯೆ ನಾಲ್ಕು ಕೋಟಿ ರೂಪಾಯಿಗಳು ಖೋತಾ ಆಗಿದೆ. ಅದನ್ನು ಸರಿದೂಗಿಸುವ ಪ್ರಯತ್ನ ಮಾಡುತ್ತಿದ್ದೇವೆಯೆಂದು ತಿಳಿಸಿದ್ದಾರೆ. ಇನ್ನು ಮುಂದೆ ಎಂದಿಗೂ ಖೋತಾ ಬಾರದ ಹಾಗೆ ನಾವೆಲ್ಲರೂ ಕೊಟ್ಟಿರತಕ್ಕ ಸಲಹೆಗಳನ್ನು ಕಾರ್ಯರೂಪಕ್ಕೆ ತಂದು ಹೇಗಾದರೂ ಮಾಡಿ ಸರ್ಪ್ಲಸ್ ಬಡ್ಜೆಟ್ ಆಗುವುದಕ್ಕೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಕೂಡಲೇ ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ. ಕೊನೆಯದಾಗಿ ನಾನು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri G. VENKATAI GOWDA (Palayam).—Sir, at the outset, I venture to point out that the budget estimates, both revenue as well as expenditure, are neither realistic nor convincing. As a matter of fact, the economic position, the loan position and the financial position of the State is anything but satisfactory. It has become practically impossible to correctly assess the real state of affairs in respect of our finances. I am stating this for this reason that the Government is coming before this House very often for grant of supplementary demands. We are aware that in 1960--61, this House has given its approval for more than 20 crores of rupees by way of supplementary and additional grants. Even assuming that the Government is able to realise at least 10 crores by way of receipts and reappropriation, there will be a gap to the extent of 10 crores so far as 1960--61 is concerned. The closing balance of 1960–61 gets affected for the simple reason that a huge sum of money, 20 crores has been taken by way of additional grants. The opening balance for 1961–62, as the Finance Minister himself has indicated, is 244.44 which also goes into the deficit. According to the current budget estimate, the deficit is 4.31 lakhs. Thus altogether, there will be a total deficit of 6.75 lakhs. If we take into consideration, the additional demands sanctioned to the extent of 20 crores and even assuming the Government realises 10 crores by way of receipts--there will clearly be 10 crores deficit on this account. Thus in the overall picture, the total deficit will run into 16 or 17 crores for 1961–62. This does present an unhappy picture of our financial position.

(Sri G. VENKATAI GOWDH)

I do not know what measures are being adopted to stabilize our finances. The Finance Minister himself has conceded that the financial position of the State has been causing great anxiety, but at the same time, he finds solace in the thought that the situation is not alarming. I fail to reconcile these two statements. Besides the defecit on revenue account, of which I have spoken just now, the Finance Minister himself has admitted that nearly six crores of Central assistance will cease with the second plan, so much so, this would again be an additional burden on the revenue account. In addition to this, we have to pay extra share so far as the third plan schemes are concerned. In view of all these, I submit that unless proper measures are adopted in order to overcome or remove this anxiety, our financial condition will become precarious or dangerous. We have been making a number of suggestions towards improvement of the finances, but to our great regret Government have, been keeping quiet about them and paid no heed to them. One of our suggestions was that the State Government should try to get the terms and conditions of the various loans due to the Government of India, rationalised and consolidated. To day, nothing appears to have been done in this regard. The Finance Minister merely says that the Government would endeavour to get liberalised terms so far as repayment of these loans are concerned but that alone would not be sufficient. Unless Government takes stringent measures to get this concession at the hands of the Centre, I think this additional burden cannot be relieved. The terms and conditions of these loans have to be rationalised and consolidated into a single debt.

My friend, Mr. Mallaradhya had indeed suggested that this Government should not be under an obligation to pay interest on loans granted for setting up productive projects, till such time as the projects begin to yield dividents in some shape or the other. That is a very good suggestion and this Government should strongly move the Centre to get it accepted. We should not have to pay interest on productive projects, till they start yielding results.

And unless such a concession is obtained, I do not think that it is possible to relieve the burden in any manner.

Sir, we have been stressing more often that non-developmental expenditure is mounting year after year. Since the year 1957-58, the non-developmental expenditure, has increased by 159 per cent—nearly 8.29 crores. Unless proper control is exercised in order to check this non-developmental expenditure, this burden on the finances of the State would not be relieved.

When we compare the tax revenue, it is also mounting abnormally. The revised figures for 1960-61 shows Rs. 3614.65 lakhs as against the budget figure of 2405.70 lakhs. More than 2 crores for one year. Indirect taxes are rapidly increasing and if we see the rise from 1957-58 to 1961-62, it is the tune of 4.31 crores. More than Re. 1/- per head

per annum. In this, the additional proposed surcharge, tax on consumption of electricity, has not been included. If that is also added, I think it will be more than 20 or 30 nP. per head. Tax revenue has increased abnormally and it will have bad consequences unless it is brought under control.

If we turn to the non-tax revenue, the net revenue from the Forest Department has been on the decline. The accounts for 1959–60 puts the net receipts at 392 lakhs and under the revised figures for 1960-61, it has declined by ten lakhs and budget figures for 1961-62, there is a further decline and the figure given is 375.8 lakhs. I do not know how Government have been obliged to take this course in not augmenting the revenues of the Forest Department.

Under Road Transport Scheme for 1959-60, they have realised 66.01 lakhs and for 1960-61, they hope to realise 21 lakhs. So, the percentage of decline so far as road transport is concerned . . . .

Sri C. K. RAJAIAH SHETTY.—Have you referred to the Budget Memorandum, in totalling they have made an error and thereby, 45 lakhs has been reduced in 1960-61 under Transport.

Sri C. M. ARUMUGHAM.—There are a lot of errors in calculation also Sir.

Sri G. VENKATAI GOWDA.—So for as the current year is concerned, it is 25 lakhs. What I would like to submit is that there is more of indirect taxes and the consequences of this also will be bad unless as I have pointed out, there is proper control. Since we have got a deficit budget, — even the Centre has shown a deficit budget — and the consequences of deficit financing, we are too aware, is already prices are going up and unless proper control is exercised, I do not think that the common man will be able to meet the situation so for as the present year is concerned.

So far as the debt position is concerned, as my friend Sri V. S. Patil pointed out yesterday, it has also been increased. I agree that borrowing is necessary in a developing economy. But we should also exercise some restraint also while borrowing. Unless that is done, it will lead to complications and inflationary tendencies would arise and naturally, the consequences of it, we are all aware. Therefore, we have got to exercise restraint so for as the rising of public debt is concerned.

I regret to point out that the allotment that has been made towards the first year of the Third Plan is also not encouraging. It is strange that 30 crores of rupees has been ear-marked for 1961-62, the first year of the Third Plan, while we have spent 47 crores for 1960-61, that is the last year of the Second plan. I have to charge the Government for having obliged to commute the ratio of the Central Assistance by grants 6.6 crores and by loans 16.18 crores for the year 1961-62, whereas if you take into consideration the Central Assistance for the same period of the Second Plan, the ratio was 50 : 50. I do not understand why Government was obliged to agree to such a proposal.

Sri C. M. ARUMUGHAM.—Have they agreed ?

Sri G. VENKATAI GOWDA.—When they make a provision like that in the Budget, it means they have agreed to it and this is irreconcilable, this being the first year of the Third Plan. It is very poor in comparison with the provisions made for several items of 1960-61.

Sc for as education is concerned for 1960-61, we have spent 3.57 crores and in 1961-62, 1.96 crores.

For public Health	1.57	0.89
for medical	0.71	0.36
for agriculture	1.22	1.11
for rural development	1.29	1.11
for industries	2.34	1.06

Sri C. M. ARUMUGHAM.—How can the Minister remember all these figures and reply to them Sir? These are minor details.

Mr. SPEAKER.—It is not necessary to reply to all the minor points.

Sri G. VENKATAI GOWDA.—The very fact that the allotmen for the first year of the Third Plan is reduced to 36.50 crores as against 47 crores of last year, shows that every item has been reduced so for as the first Year of the Third Plan is concerned.

Sri M. C. NARASIMHAN.—That is because we are reaching the take-off stage this year.

Sri G. VENKATAI GOWDA.—My friend Sri Narasimhan has already brought to the notice of the Government the point that more emphasis should be laid on the stabilisation and how it should be urged before the Third Finance Commission. As a matter of fact, before the Second Finance Commission, they did not bring up the case of zamin abolition. That has got to be made out now at least before the Third Finance Commission to the extent of 22.92 lakhs.

Sir, the debt charges are mounting high. This is also a point to be brought to their notice. Interest on loans is also mounting and the commitee expenditure on account of community development and C. D. Blocks. We have got to claim our due share in excise duties and properties on the basis of present income. To that extent, Mysore has got to make a very fine case before the Third Finance Commission when it visits the State and has got to claim more of central assistance which will to some extent relieve the financial burden that has now been placed on the revenue account of the State.

9-30 A.M.

No doubt they propose to raise additional taxation by way of surcharge on land revenue and also increase in the tax on consumption of electricity on certain classes of consumers, but at the same time, I want to ask the Government what are the reliefs that they propose to provide to the people. Even in Madras and other States, even though

they levy additional taxes at the same time, they also provide reliefs to the common man, but nothing appears to have been done in Mysore. In Madras, they have provided for free education up to the 11th standard for all people. They have made phenomenal progress in the library movement. They have taken upon their head to electrify all the villages within the third plan. They have also constituted an Industrial Investment Corporation to at tract private capital. In the Punjab, they have introduced crop insurance in the State. These are some of the relief measures that could have been adopted in Mysore State which they have not done.

So far as the small savings scheme is concerned, I venture to point out that it has become a farce and failure in the State. The Finance Minister may say that the fact that the public loan has been oversubscribed shows that the small savings scheme also is successful, but my submission is what is the intention of this small savings scheme. It is to see that the middle class, the lower middle class and the poor people may save something and contribute towards these developmental schemes. Has it become possible for the Government to get contributions from these classes of people? It has not been possible for them to do that because the people are not able to save anything to contribute for this purpose. There might be some cases here and there of some unions of workers contributing something, but that does not mean that the commonman has been able to contribute to this scheme. That is why I say that this scheme has become a farce and it is not successful. The Finance Minister hopes to get Rs. 4 crores per annum from small savings. He says that "Small Savings Scheme is one of the important sources from which much can be expected and it is on account of this reason that an important role has been assigned to it in National Reconstruction. Though the Scheme is gaining Momentum in this State from year to year, it has still got to make much headway when compared with the performance in the neighbouring States. Unless our net collections go up to at least Rs. 4 crores per annum, we cannot rest content that the scheme has gained sufficient popularity in this State." My submission is that this Scheme has become unsuccessful.

Yesterday,my friend Sri Sivappa was claiming that the Government of Mysore now is spending on education more than what it used to do before. As a matter of fact in 1955-56, Mysore was spending 19.1 per cent out of the total revenue expenditure on education, but now, it has come down from 19.1 per cent to 18.1 per cent in 1961-62, while in Madras in 1955-56 they were spending 18.1 per cent, they are now, spending about 22. 25 per cent, that is, more than 4¼ per cent. It might be because of the increase in the size of the State the amount provided might be more, but the over-all picture is that the expenditure has come down from 19.1 per cent to 18.1 per cent. Therefore, unless some measures are taken to relive the financial burden, I am afraid the consequences will be very dangerous

(Sri G. VENKATAI GOWDA)

to the State. The first thing that should be done is to try to get all concessions possible at the hands of the Government of India in respect of payment of interest and the terms and conditions of the loans. Secondly, more financial assistance has got to be obtained in view of the stringent conditions prevailing in the State. We have been obliged to pay all the loans and liabilities as a result of integration of States. The Government have undertaken to discharge those liabilities which arose as a result of integration, but I want to ask Government what has happened to the corresponding assets that are due to this State on account of integration. Are we not entitled to corresponding assets due to us on account of integration of States when we are obliged to undertake to pay all the liabilities coming to us on account of integration?. For the past 4½ years, we have not been able to settle the assets and the liabilities on account of integration. That shows the indifference of the Government in this matter. The Minister has not been able to answer for the last 4½ years what are the assets and what are the liabilities coming to our share on account of integration. This matter should be settled once for all without any delay.

Yesterday, my friend Sri Patil was saying that even the assets that have been shown do not indicate their correct valuation. They have taken credit for more than the actual value of the assets apparently to show that the financial position of the State is sound. That is why I say that the actual financial position of the State is very dangerous and unless the remedies that I have suggested are taken, we will not be able to carry this burden.

It is proposed to raise about Rs. 43 crores by way of taxation in the third plan period. That works out to nearly Rs. 8.35 crores per year. What are the measures that the Government of Mysore are going to adopt to raise this huge taxation? They should first of all stop the wastages in the several departments, bring about uniformity in respect of all the laws in the various parts of the State, stop the leakage of revenue especially in the Road Transport Department and take over all economy measures. If these things are not done, we cannot get any additional revenue. The additional burden on the revenue in 1961-62 itself is very heavy and I do not know how they will be able to carry on for the rest of four years of this third plan. So, I say that unless the measures that I have outlined above are taken to relieve the burden of the people, conditions would grow from bad to worse. That is why, I say we cannot see how the Government are going to raise this huge amount of additional taxation. We are very unfortunate that so far as Central Assistance is concerned, we are not being helped to the extent that we deserve during the third plan.

Yesterday, the Finance Minister was replying to a question raised in respect of the recent G.O. regarding the grievances of N.G.Os. In fact, the weightage now permitted under the G.O., I venture to point out

is illusory, because it is highly restrictive in the sense that it is intended to deprive a large number of employees of the benefit from the operation of the provision for weightage. My friend Sri B. Rachaiah has said that unless weightage is given at least to the extent of five increments so far as those who have put in a number of years' service are concerned, they are not going to get any benefit. On the question of revision of pay, I asked a specific question. This question was engaging the attention of the Government for one year from January 1956 and it is desirable that retrospective effect should be given so far as that matter is concerned.

In respect of University Lecturers working in the Colleges belonging to Government now, I am told that the Government has taken a decision to terminate the services of those Lecturers working in Government Colleges who are termed as local candidates; their services are sought to be terminated by the end of this month. Justice was not done when they were under the University and when the Government took over the Colleges, they had high hopes that the Education Minister would be coming to their rescue and their services would be regularised. Now I am told that the Government has taken a decision to terminate their services. I do not know in what way those local candidates could be helped. Their continuous service would not be availed of ; since there would be breakage of service. What the University has been doing it is not open to the Government to continue. I request the Government to regularise the services of those people if they are working for the last 4-5 years. Their services used to be terminated by 31st March and they used to be taken in July or August. In a limited sense, their services were not continuous. Therefore, in respect of those Lecturers working for the last 4-5 years, irrespective of the breakage of service for 3-4 months, I request Government to regularise their services. The other day, I received a pamphlet saying that 250 temporary Lecturers in Government Colleges would be on hunger strike before Vidhana Soudha. If their services are not regularised, they would do like this. So it speaks of the very many hardships that are ahead of us. I submit to the Minister for Education at least on equity it is justifiable to have their services regularised.

So far as the receipt of land revenue, no doubt it has been encouraging ; but the expenditure also has been correspondingly on the increase. While the increase in the revenue is of the order of one eighth the expenditure is three times. Really 25 per cent of the revenue collection we are spending towards the collection. That has got to be borne in mind and Government should see that as far as possible, the expenditure is brought to the lowest limit possible. Even in registration, we are spending about 50 per cent of the income that we are deriving. So far as other taxes and duties are concerned, we are spending more than 30 per cent of the revenue we are deriving. On every item, our expenditure is more to the realisation in that regard. In regard to sales tax, we are spending four per cent. If we bring down the expenditure for collection as much as possible, then this

(Sri G. VENKATI GOWDA)

wasteful expenditure can be avoided and economy can be brought out.

So far as the Resources and Economy Committee is concerned, I do not know what their report would be. Mr. Gorwala in his Report has given some suggestions in the direction of reducing the normal expenditure. I submit there is a tendency in almost all the States to create new posts, to sanction new posts. But in the interests of avoiding wasteful expenditure, it is desirable as Mr. Gorwala says to cut down all these things. There are very many suggestions by Mr. Gorwala and the Madhava Rau Committee and in spite of it, I do not know what the present Committee is going to suggest. We have already indulged in wasteful expenditure. That is the way things are being done. Therefore, I submit that in order to relieve the burden on the finances of the State, it is better to take proper measures and see in the interests of the State they have more revenue and less expenditure in Consonance with the very many developmental activities.

Even in respect of targets during the Second Five-Year Plan, one could scrutinise the targets that are claimed to have been achieved. It is far less, not in consonance with the expenditure incurred in that behalf. For afforestation, they have contemplated to cover 75 lakhs of acres; but it is only 43 lakhs of acres that are brought under this scheme, about 57 per cent of what they have contemplated. In respect of community development projects, only 51 per cent has been achieved and even then, it is not commensurate with the expenditure incurred in that behalf. Physical targets are not commensurate with the money that is spent for that purpose. My friend Sri M. C. Narasimhan said that we are investing on things which would not yield anything. As far as possible, we should avoid non-productive assets. With these few observations, I say that the days to come in 1961-62, are causing us very great anxiety.

Srimati V. V. MIRJANKAR (Kumta).—Mr. Speaker, Sir, I rise to support the Budget for the year 1961–62 as presented by the Minister for Finance. While doing so, I would like to make a few observations on the past performances of the Second Plan period and how best they could be overcome during this year.

Reviewing the work turned out in some of the departments, Sir, there shall not be diversity in the opinion, if I say, that the achievements are highly appreciable. But, how far have we been successful in establishing a welfare state and whether a correct path is followed in providing a decent human existence, by providing the basic necessities to the people of the rural parts? Food, clothing, health and education are the foremost. In this respect, though great emphasis has been laid on production of food in the Second Plan, the State has not attained self-sufficiency. The advantage of it has been

taken by some indulging in profiteering and raising the prices of foodgrains beyond justification. The inflation of food has gone so much that the plight of middle and lower classes has become quite miserable. If this rise in prices is not checked in time, the prices of essential commodities will go beyond the reach of the middle and upper class people. Government should take proper measures to stop this rise of prices. In answer to a question yesterday, the Minister for Agriculture disclosed in this House that Government will consider extending all possible help to local bodies who come forward to forming milk supply units. In order to bring about the diet change in our habits, I feel, co-operative diary schemes should be encouraged. The schemes contemplated in the Third Plan by the Government seem to benefit only those people living in big cities like Bangalore and Dharwar and such places. I am sure that Government is aware of the fact milk is in great demand even in other parts of the State. My findings go to show that even the poor and middle class women in my part can make a subsidiary living by selling milk. There is ample scope for bringing them by co-operative methods, if Government takes a lenient attitude and encourage diary farm in rural parts. Diary farm should be considered as an allied industry and medium term loans should be made available to such societies.

Now, coming to the Medical and Health Services in the State, the administrative Machinery needs gearing up. There are some Members present here who happened to be victims of the ill-fated accident of the bus at the time of Kedda operations. They would be in a proper position to illustrate the kind of treatment meted out to the victims in the Victoria Hospital which is in the Headquarters : Sir, conditions prevailing in other parts of the State are nonetheless better. Able and efficient hands should be posted to the district hospitals as it is here that the common man looks to the help. Our district being a forest area, ways and means should be found out to post medical personnels to these parts. Reasons have been put forth by the Minister often that there is shortage of medical personnel has no justification. Doctors posted to these areas should be offered special rural allowances or consider their service in the rural parts for special increments. To give the true picture of the situation, there are several forest dispensaries in my district which are without doctors for the last several years. S.M.P. Centres are also there in the villages where the doctors are getting neither fixed Travelling Allowance nor any honorarium. The most peculiar thing is, some of these centres are not supplied with medicines also, the allotment being only three hundred rupees per year; even that is not given. There are eight centres of this type. Of coursse, there are Health Units and R.S.L.F. dispensaries which are in no way placed in a better position. It is my personal request to the concerned Minister to come and tour in my district leisurely, though it means lot of inconvenience to him, as the journey is a strenuous one ; but, he can see things as they are. Recently, there was spread of

(Smt. V. V. MIRJANKAR)

small-pox epidemic in my taluka which took a heavy toll of life. There were several instances where the complete family was attacked and there was nobody t6 take care of them. There was need for opening seggregation camps; Even that was not attended to. In this respect, I can only say that the Public Health Department has miserably failed in sending proper services to the people of my area.

As regards improvement of communication is concerned, particularly in rural and backward areas, the progress has been most conspecuous. In my last speech, I had made a particular reference to the Kannada Encyclopedia. I am glad that the Director of Literary and Cultural Development has recently published a model or sample booklet. This work was proposed at the cost of 40 lakhs of rupees. But, there are several criticisms about the compilation of this work by people, met at the time of Sahitya Sammelan which was recently held ful at Manipal.

I request the Minister concerned to examine the work turned over by the Committee constituted for the purpose and if necessary, compel all articles to be revised and take early precautions to see that this encyclopaedia will not be a wasteful production in Kannada.

I shall now come to the observations made by the Finance Minister about the constitution of the Resource and Expenditure Committe. It has been set up to Examine the question of bringing about substantial Economy in Government Expenditure. My friend here on my left had already remarked how best each Minister could contribute, of his own accord, substantially in bringing about economy in expenditure. Many Members have commented on the wasteful and ostentatious expenditure incurred by Government during the last four years. My observation is that this Comittee was not required at all. Similar Committees were constituted before aud we, the Members of this House also discussed the Gorwala Report iu this Assembly and offered valuable suggestions; Is it to be presumed that all this was a cry in wilderness? Why not the Finance Minister take a bold step to dissolve this Committee.

Recently, Deputy Minister; Srimati Tarakeshwari Sinha, who visited Banga ore, has set up an example for us to follow, in her recent Padayatra drive under the National Savings Campaign. She was able to collect 12 lakhs. If this sense of patriotism and self-sacrifice prevails upon the Membres of the Board for National Savings, which has been constituted at the State level, I think much could have been achieved. Looking at the amount spent in T.A. and D.A. by the Members of the Boards for attending meetings and making tours for popularising the schemes, the strain on the exchequer is too heavy. The expenditure so for incurred has not brought about substantial returns. Popularising such schemes depends more upon the co-peration of local leaders. It is my suggestion that the Ministers and Deputy

Ministers, who wield more influence and the public, during their frequent tours of the State, may make it one of their duties to popularise this scheme. If that could be done, I do not think there will be a necessity for having a State Board mainly for this purpose.

Coming to the pay structure, I am glad that the Finance Minister has at least extended some relief to the Government employees. The new pay structure envisages the grant of immediate monetary relief ranging from 11 to 13 rupees, including interim relief, to all the employees of the State drawing a pay of about Rs. 250 and below. An examination of a few scales, particulary those of low-paid employees, that is, class III and IV, would reveal practically no monetary benefits to them. Though it is the policy of the Government not to reduce the total emoluments drawn by them, the effect will still remain that these employees are not at all benefited by the present pay revision. Those who have put in more then 9 years of service are actually at a loss. In the present pay scheme, there is practically no revision of pay scales in respect of employees serving in Bombay area. These employees have to draw less than what they have been drawing in the parent State. For the successful functioning of Government, the willing cooperation of its employees is necessary. Discontentment among the services should be removed to the extent possible. Hence such cases have to be reconsidered and I appeal to the Finance Minister to re-examine the whole issue and see if any benefit could be extended to such employees. Thank you.

10. 06 A.M.

The House adjourned for Recess at Six Miniutes past Ten of the Clock and re-assembled at Forty Minutes past Ten of the Clock.

[Mr. SPEAKER in the Chair]

ಶ್ರೀ ವೈ. ವೀರಪ್ಪ.—(ಹೊಳೇನರಸೀಪುರ) ಮಾನ್ಯ ಸಭಾಧ್ಯಕ್ಷರೇ, 1961–62ನೇ ಸಾಲಿನ ಈ ಆಯವ್ಯಯ ಬಡ್ಜೆಟ್ಟಿನ ಮೇಲೆ ಅನೇಕ ನನ್ನ ಸ್ನೇಹಿತರು ತಮ್ಮ ಅಭಿಪ್ರಾಯ ಗಳನ್ನು ಪ್ರತಿಬಿಂಬಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ವಿರೋಧಪಕ್ಷದ ಅನೇಕ ಸದಸ್ಯರು ಈ ಸಭೆಯಲ್ಲಿ ರಚನಾತ್ಮಕವಾದ ಸೂಚನೆಗಳನ್ನು ಕೊಟ್ಟಾಗ್ಯೂ ಕೂಡ ಆಡಳಿತಪಕ್ಷದವರು ಕೇವಲ ಅವನ್ನು ಒಂದು ಕಪಿಮುಷ್ಟಿ. ರೀತಿಯಲ್ಲಿ ಸ್ವೀಕರಿಸುತ್ತಿರುವುದನ್ನು ನೋಡಿದರೆ ನಿಜವಾಗಿ ಅದೊಂದು ನಮ್ಮ ಮತ್ತು ದೇಶದ ದೌರ್ಭಾಗ್ಯವೆಂದು ನಾನು ತಿಳಿದುಕೊಂಡಿದ್ದೇನೆ, ಸಾಮಾನ್ಯವಾಗಿ ಪ್ರಜಾಪ್ರಭುತ್ವ ದಲ್ಲಿ ವಿರೋಧಪಕ್ಷಕ್ಕೇ ಹೆಚ್ಚು ಮಹತ್ವವನ್ನು ಕೊಡತಕ್ಕದ್ದು. ಸರ್ಕಾರದ ಆದ್ಯ ಕರ್ತವ್ಯ. ಅದನ್ನು ಅವರೂ ಒಪ್ಪಿಕೊಳ್ಳುತ್ತಾರೆ. ಹೀಗಿದ್ದಾಗ್ಯೂ ಕೇವಲ ವಾದದ ದೃಷ್ಟಿಯಿಂದ, ಅಥವಾ ಕೇವಲ ಡಿಫೆನ್ಸ್ ದೃಷ್ಟಿಯಿಂದ ವಿರೋಧಪಕ್ಷದವರು ಕೊಟ್ಟದ್ದಂತಹ ರಚನಾತ್ಮಕ ಅಭಿಪ್ರಾಯಗಳನ್ನು ಆಡಳಿತ ಪಕ್ಷದವರು ತಿಳಿದುಕೊಳ್ಳುವುದು ಸರಿಯಲ್ಲ. ಇನ್ನು ಮುಂದಾ ದರೂ ಈ ಪ್ರವೃತ್ತಿಯನ್ನು ಬಿಡಬೇಕೆಂದು ಸರ್ಕಾರದವರಿಗೆ ಹೇಳುತ್ತೇನೆ. ಈ ಬಗ್ಗೆ ಹಟ್ಟಿಗೆ

(ಶ್ರೀ ವೈ. ವೀರಪ್ಪ)

ವಿಳಂಬ ಮಾಡಿಕೊಂಡು ನಾನು ವಿಶದೀಕರಿಸುವುದಕ್ಕೆ ಹೋಗುವುದಿಲ್ಲ. ಈಗ ವಿಶಾಲ ಮೈಸೂರು ರಾಜ್ಯ ಸ್ಥಾಪನೆಯಾದರೂ ಕೂಡ ರಾಜ್ಯ ಸರ್ಕಾರದವರು ಕನ್ನಡಕ್ಕೆ ಹೆಚ್ಚಿಗೆ ಉತ್ತೇಜನವನ್ನು ಕೊಡಲಿಲ್ಲ. ಇದು ಬಹಳ ವಿಷಾದಕರವಾದ ಸಂಗತಿಯಾಗಿದೆ. ಅಂಥಾದ್ದನ್ನು ಬಹು ಸೂಕ್ಷ್ಮವಾಗಿ ಸರ್ಕಾರದವರು ತಿಳಿದುಕೊಳ್ಳಬೇಕಾಗಿದೆ. ಮುಖ್ಯವಾಗಿ ಈ ಬಡ್ಜೆಟ್ಟನ್ನು ಅಚ್ಚುಮಾಡಿರುವ ರೀತಿಯೇ ಸರಿಯಾಗಿಲ್ಲ. ಹಿಂದೆ 1941–42ರಲ್ಲಿ ಈ ಬಡ್ಜೆಟ್ ಕಾಪಿಗಳನ್ನೆಲ್ಲಾ ಕನ್ನಡದಲ್ಲಿಯೂ ಅಚ್ಚುಮಾಡಿ ಸದಸ್ಯರಿಗೆ ಸಪ್ಲೈ ಮಾಡಿರುವ ಸಂಗತಿ ನನಗೆ ಗೊತ್ತಿದೆ. ಆದಾಗ್ಯೂ ಈಗ ಕನ್ನಡ ರಾಜ್ಯವಾಗಿರುವಾಗ ಈ ಬಡ್ಜೆಟ್ ಕಾಪಿಗಳನ್ನೆಲ್ಲಾ ಏತಕ್ಕೋಸ್ಕರ ಕನ್ನಡದಲ್ಲಿ ಅಚ್ಚುಮಾಡುವುದಿಲ್ಲ ಎಂದು ನಾನು ಕೇಳುತ್ತೇನೆ. ಕನ್ನಡಕ್ಕೆ ನಮ್ಮ ರಾಜ್ಯ ಸರ್ಕಾರದವರು ಹೆಚ್ಚಿನ ಉತ್ತೇಜನವನ್ನು ಕೊಡಲೇಬೇಕು, ಬೇರೆ ಬೇರೆ ಭಾಷಾ ಪ್ರಾಂತಗಳು ರಾಜ್ಯ ಪುನರ್ವಿಂಗಡೆಯಾದ ಮೇಲೆ ಎಸ್. ಆರ್. ಸಿ. ಆಕ್ಟ್ ಪ್ರಕಾರ ಅವು ತಮ್ಮ ತಮ್ಮ ಭಾಷೆಯನ್ನು ರಾಜ್ಯಭಾಷೆಯನ್ನಾಗಿ ಈಗಾಗಲೇ ಪರಿವರ್ತಿಸುತ್ತಿರುವಾಗ ಲಿಂಗ್ವಿಸ್ಟಿಕ್ ಬೇಸಿಸ್ ಮೇಲೆ ಅವರು ಆ ರೀತಿ ಮಾಡುತ್ತಿರುವಾಗ ನಾವು ನಮ್ಮ ರಾಜ್ಯದಲ್ಲಿ ಕನ್ನಡಭಾಷೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಸರ್ಕಾರದವರು ಇದಕ್ಕೆ ಹೆಚ್ಚಿನ ಉತ್ತೇಜನವನ್ನು ಕೊಡಬೇಕು. ಈಗಾಗಲೇ ಕೊಡುತ್ತಿದ್ದಾರೆಂದು ನಾನು ತಿಳಿದಿದ್ದೇನೆ. ಅದು ಒಳ್ಳೆಯದು.

ಇನ್ನು ನಮ್ಮ ಮುಂದಿರತಕ್ಕ ಈ ವರ್ಷದ ಆಯವ್ಯಯ ಪಟ್ಟಿಯ ಬಗ್ಗೆ ವಿಚಾರ ವಿನಿಮಯಮಾಡಿ ನೋಡಿದರೆ, ಇದು ನಿಜವಾಗಿ ಆಶಾದಾಯಕವಾದ ಆಯವ್ಯಯ ಪಟ್ಟಿಯಂತೆ ಇಲ್ಲವೆಂದು ನಾನು ಅನಿವಾರ್ಯದಿಂದ ಹೇಳಬೇಕಾಗಿದೆ. ಈ ಆಯವ್ಯಯ ಪಟ್ಟಿ ಡಿಫೆಕ್ಟಿವ್, ಇನ್‌ಕಂಪ್ಲೀಟ್ ಎಂದು ಹೇಳುತ್ತಿದ್ದೇನೆ. ಅದಕ್ಕೆ ಒಂದೇ ಒಂದು ನಿದರ್ಶನವನ್ನು ಈ ಸಭೆಯ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಬಜೆಟ್ ಎಸ್ಟಿಮೇಟ್ಸ್–ಎಕ್ಸ್‌ಪೆಂಡಿಚರ್ ಎಂಬ ಬುಕ್ಕಿನಲ್ಲಿ, ರೆವಿನ್ಯೂ ಬಗ್ಗೆ ಮಾಡಿರತಕ್ಕಂಥ ಅಬ್‌ಸ್ಟ್ರಾಕ್ಟನ್ನು (ಪೇಜ್ 2) ನೋಡಿದರೆ, 1961–62ಕ್ಕೆ ಬಜೆಟ್ ಎಸ್ಟಿಮೇಟು. ರೂ. 3,86,57.000 ಎಂತ ಇದೆ. ಅದರ ಕೆಳಗಡೆ total gross-*noted* : ರೂ. 3,86,54,000 ಅಂತ ಇದೆ. 57 ಸಹಸ್ರ ಇದ್ದದ್ದು 54 ಸಹಸ್ರ ಹೇಗೆ ಬಂದಿತು! ಎರಡನೆಯದಾಗಿ, 1960-61ರಲ್ಲಿ ಬಜೆಟ್ ಎಸ್ಟಿಮೇಟ್ಸ್; ರೂ. 56,91,300 ರಿವೈಸ್ಡ್ ಎಸ್ಟಿಮೇಟ್ಸ್ ನೋಡಿದರೆ ರೂ. 55,37,300 ಅಂತ ಇದೆ. 1961-62ರಲ್ಲಿ ನೋಡಿದರೆ ರೂ. 37,31, 400 ಇದೆ. ಇಷ್ಟು ಕಮ್ಮಿ ಎಸ್ಟಿಮೇಟು 1961-62ಕ್ಕೆ ಮಾಡುವುದಕ್ಕೆ ಯಾವ ಕಾರಣಗಳಿವೆ? ಗವರ್ನ್‌ಮೆಂಟ್ ಡಿಪಾರ್ಟ್‌ಮೆಂಟುಗಳಲ್ಲಿ ಏನಾದರೂ ರಿಟ್ರೆಂಚ್‌ಮೆಂಟ್ ಮಾಡಿ ಕೊಂಡಿದ್ದಾರೆಯೇ ಎನ್ನುವುದಕ್ಕೆ, ಯಾವ ಸೂಚನೆಯನ್ನೂ ಕೊಟ್ಟಿಲ್ಲ. ಇದರ ಬಗ್ಗೆ ಮಂತ್ರಿಗಳು ಎಕ್ಸ್‌ಪ್ಲನೇಷನ್ನನ್ನು ತೃಪ್ತಿಯಾಗುವ ರೀತಿಯಲ್ಲಿ ಕೊಡುವುದು ಉತ್ತಮ. ಇದು ಕೊರತೆಯ ಬಜೆಟ್-ಆಗಿದೆ, 4.31 ಕೋಟಿ ಖೋತಾವನ್ನು ನಿರೀಕ್ಷಿಸಿದೆ ಎಂದು ಹೇಳುತ್ತೀರಿ. ಈಗ ತಾನೇ ಸರ್ಕಾರದವರು ಪೇ ಕಮಿಟಿ ರಿಪೋರ್ಟ್ ಮೇಲೆ ಹೊರಡಿಸಿರುವ ಆರ್ಡರನ್ನು ನೋಡಿದರೆ, 10-11 ಪುಟದಲ್ಲಿ efficiency in Services ಎಂಬ ಹೆಡಿಂಗಿನ ಕೆಳಗೆ direct recruitment in the first division clerical poets will hereafter be restricted to a lower percentage. Seperate orders will be issued after consulting the Public Service Commission ಎಂದಿದೆ. ಪಬ್ಲಿಕ್ ಸರ್ವಿಸ್ ಕನ್‌ಸರ್ಟ್ ಮಾಡಿ ರಿಕ್ರೂಟ್‌ಮೆಂಟ್ ರೂಲ್ಸ್‌ರಿವೈಸ್ ಮಾಡಿ, ಇನ್ನು ಮುಂದೆ ಸಂಬಳ ಹೆಚ್ಚು ಮಾಡಿಕೊಳ್ಳುವ ಸೂಚನೆ ಇದೆ. 11ನೆಯ ಪೇಜಿನಲ್ಲಿ under the heading "other recommendations of the committee pertaining to specific posts or Departments" ಎಂಬುದರಲ್ಲಿ

ಕೂಡ ಹೇ ಜಾಸ್ತಿಮಾಡುವ ಸೂಚನೆ ಇದೆ. ಇದರ ಬಗ್ಗೆ ನಮ್ಮ ಬಜೆಟ್ಟಿನಲ್ಲಿ ಯಾವ ಪ್ರಾವಿಷನ್ನನ್ನೂ ಮಾಡಿಲ್ಲ. ಮುಂದೆ ಸಪ್ಲಿಮೆಂಟರಿ ಬಜೆಟ್ಟನ್ನು ಕೇಳುವ ಪ್ರವೃತ್ತಿಯನ್ನು ಇಟ್ಟುಕೊಂಡಿರುವುದರಿಂದ, ಈಗ ತೋರಿಸಿರುವ ಡಿಫಿಸಿಟ್ಟಿಗಿಂತ ಜಾಸ್ತಿ ಡಿಫಿಸಿಟ್ ಬರುತ್ತದೆಂಬ ಶಂಕೆ ಉಂಟಾಗಿದೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಸೂಕ್ತವಾದ ಮತ್ತು ತೃಪ್ತಿಕರವಾದ ರಿಪ್ಲೈಯನ್ನು ಕೊಡಬೇಕು.

ನನ್ನ ಅನೇಕ ಸ್ನೇಹಿತರು ರಿಸರ್ವ್ ಫಂಡು ಅಷ್ಟು ಆಶಾದಾಯಕವಾಗಿಲ್ಲವೆಂದು ಹೇಳಿದಾಗ, ಆರ್ಥಿಕ ಮಂತ್ರಿಗಳು ಅವರಿಗೆ ಬಹಳ ಲಘುವಾಗಿ ಉತ್ತರ ಕೊಟ್ಟರು. 1947ನೆಯ ಇಸವಿಗೆ ಮುಂಚೆ ರಿಜರ್ವ್ ಫಂಡನ್ನು ಕೂಡಿಟ್ಟ ಆಗಿನ ಆಡಳಿತಗಾರರು ಅವಿವೇಕಿಗಳೆಂದು ಭಾವಿಸುತ್ತೀರಾ ? ಅಥವ ಅವರು ನಿಜವಾಗಿ ಮುಂದಾಲೋಚನೆಯಿಂದ ರಿಜರ್ವ್ ಫಂಡನ್ನು ದೇಶದ ಜನತೆಯ ಹಿತದೃಷ್ಟಿಯಿಂದ ಬಿಲ್ಡ್ ಮಾಡಿದರು ಎಂದು ಭಾವಿಸುತ್ತೀರಾ. ಕೇಂದ್ರದ ಮಂತ್ರಿಗಳಾದ ಪಾಟೀಲರು ಆಹಾರದ ಬಗ್ಗೆ ಬಫರ್ ಸ್ಟಾಕ್ ದೇಶದಲ್ಲಿ ಇರಬೇಕೆಂದು ಹೇಳಿದ್ದಾರೆ. ಬಫರ್ ಸ್ಟಾಕ್ ಏತಕ್ಕೆ ಇಡಬೇಕೆಂದು ಹೇಳಿದರು. ಅನಿರೀಕ್ಷಿತವಾಗಿ ತೊಂದರೆ, ಕ್ಷಾಮ ಡಾಮರಗಳು ಬಂದಾಗ ಜನಗಳು ಬಂದು ಕಷ್ಟವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಬಫರ್ ಸ್ಟಾಕ್ ಇಡುವುದಕ್ಕೆ ಹೇಳಿದರು. ಅದೇ ರೀತಿಯಲ್ಲಿ ದೇಶದಲ್ಲಿ ರಿಜರ್ವ್ ಫಂಡ್ ಅಂದರೆ ಆಪದ್ಧನವನ್ನು ಇಟ್ಟುಕೊಂಡಿರತಕ್ಕಂಥಾದ್ದು ದೇಶದ ಒಂದು ಆಡಳಿತದ ಭದ್ರತೆಗೆ ಯೋಗ್ಯವೆಂದು ತಿಳಿಸಿದಾಗ, ಆರ್ಥಿಕ ಮಂತ್ರಿಗಳು ಅದಕ್ಕೆ ಲಘುವಾಗಿ ಉತ್ತರ ಕೊಟ್ಟಿದ್ದು ನಮಗೆ ನಿಜವಾಗಿಯೂ ಅತೃಪ್ತಿಯನ್ನುಂಟುಮಾಡಿದೆ. ದೇಶದ ರಿಜರ್ವ್ ಫಂಡ್ ಇದ್ದೇ, ಇರಬೇಕು. ದೇಶದಲ್ಲಿ ಒಂದು ರಿಜರ್ವ್ ಫಂಡ್ ಇರತಕ್ಕಂಥಾದ್ದು ಒಳ್ಳೆಯ ಶುಭ ಸೂಚನೆ. ಇನ್ನುಮೇಲಾದರೂ ಕೂಡ ರಿಜರ್ವ್‌ಫಂಡ್ ಇಡುವುದಕ್ಕೆ ರಾಜ್ಯ ಸರ್ಕಾರದವರು ಖಚಿತವಾಗಿ ಯೋಚನೆಗಳನ್ನು ಹಾಕಿಕೊಂಡು ಕೆಲಸಮಾಡಬೇಕು.

ಶ್ರೀ ಬಿ. ಡಿ. ಜತ್ತಿ (ಮುಖ್ಯಮಂತ್ರಿಗಳು).—ರಿಜರ್ವ್ ಫಂಡ್ ಉಪಯೋಗಿಸಬಾರದೆಂದು ಹೇಳುತ್ತೀರಾ ?

ಶ್ರೀ ವೈ. ವೀರಪ್ಪ.— ಯಾವ ಪ್ರಸಂಗದಲ್ಲಿಯೂ ರಿಜರ್ವ್ ಫಂಡ್ ಉಪಯೋಗ ಮಾಡಬಾರದೆಂದು ಹೇಳಲಿಲ್ಲ. ಊಟಮಾಡದೆ ಕಣಜದಲ್ಲಿಯೇ, ಗ್ರೇನರಿಯಲ್ಲಿಯೇ ಆಹಾರವಿರಬೇಕೆಂದು ಹೇಳಲಿಲ್ಲ. ಅನಿರೀಕ್ಷಿತವಾಗಿ ತೊಂದರೆಗಳು ಬಂದಾಗ, ಅವುಗಳನ್ನು ನಿವಾರಿಸಲು ರಿಜರ್ವ್ ಫಂಡ್ ಆಪದ್ಧನವಾಗಿರಬೇಕು ಎಂದು ಹೇಳಿದರು. ಆರ್ಥಿಕ ಮಂತ್ರಿಗಳು ಲಘುವಾಗಿ ಜವಾಬು ಕೊಟ್ಟರು.

ಶ್ರೀ ಬಿ. ಡಿ. ಜತ್ತಿ.—ಈಗ ನಾವು ಅದರಲ್ಲಿ ಎಷ್ಟು ಪರ್ಸೆಂಟ್ ವಿತ್‌ಡ್ರಾಮಾಡುವುದಕ್ಕೆ ಪರ್ಮಿಷನ್ ಇದೆಯೋ ಅಷ್ಟೇ ವಿತ್‌ಡ್ರಾಮಾಡಿದ್ದೇವೆ. ವಿತ್‌ಡ್ರಾಮಾಡುವುದಕ್ಕೆ ನಿಯಮ ಉಂಟು ; ಅದಕ್ಕೆ ಹೆಚ್ಚಿಗೆ ವಿತ್‌ಡ್ರಾಮಾಡಲಿಕ್ಕೆ ಪ್ಲಾನಿಂಗ್ ಕಮಿಷನ್, ಗವರ್ನ್‌ಮೆಂಟ್ ಆಫ್ ಇಂಡಿಯ, ರಿಜರ್ವ್ ಬ್ಯಾಂಕ್ ಒಪ್ಪುವುದಿಲ್ಲ. ಆ ಲಿಮಿಟ್ ಬಿಟ್ಟು ಹೋಗಿಲ್ಲವೆಂದು ಫೈನಾನ್ಸ್ ಮಿನಿಸ್ಟರು ಹೇಳಿದರೇ ಹೊರತು, ಇನ್ನೇನೂ ಇಲ್ಲ. ಆ ಲಿಮಿಟ್ ಬಿಟ್ಟುಹೋಗಿದ್ದರೆ, ತಾವು ಹೇಳುವುದು ಸರಿ.

ಶ್ರೀ ವೈ. ವೀರಪ್ಪ.—ತಾವು ಒಂದು ಅಂಶಕ್ಕೆ ಉತ್ತರಕೊಡಬೇಕು. 1947ಕ್ಕೆ ಮುಂಚೆ ಇದ್ದ ಬೇಜವಾಬ್ದಾರಿ ಸರ್ಕಾರ ದೇಶದ ಒಂದು ಹಿತದೃಷ್ಟಿಯಿಂದ ಇಡಲಾಗಿದ್ದ ಹಣವನ್ನು, ನೀವು 1947ರ ನಂತರ ಬಂದ ಬೇಜವಾಬ್ದಾರಿ ಸರ್ಕಾರದವರು ಅದನ್ನು ಖರ್ಚುಮಾಡಿ ಹೀಗೆ ವಾದಮಾಡುವುದು ಸರಿಯೇ. ವಾದ ಮಾಡದೆ ಹೋದರೆ ಆಗುತ್ತದೆಯೇ ? ಅಭಿವೃದ್ಧಿ ಯೋಜನೆಗಳಿಗಾಗಿ, ದೇಶದ ಜನತೆಯ ಸುಖಸಂಪತ್ತುಗಳಿಗಾಗಿ, ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಹಣ ಖರ್ಚುಮಾಡಬೇಕು. ಆದರೆ ದೇಶದಲ್ಲಿ ಆರ್ಥಿಕ

(ಶ್ರೀ ವೈ. ವೀರಪ್ಪ)

ಮುಗ್ಗಟ್ಟನ್ನು ನಿವಾರಣೆ ಮಾಡಲು ಇರತಕ್ಕಂಥ ಹಣವನ್ನು ವ್ಯಯಮಾಡುವುದು ಸರಿಯೇ ? ಆಪದ್ಧನ ಇಡತಕ್ಕಂದಥದ್ದು ಆರ್ಥಿಕ ನೀತಿ ಎಂದು ತಿಳಿದುಕೊಂಡಿದ್ದೇನೆ. ಈ ಅನರ್ಥ ಮಾಡಿರ ತಕ್ಕಂಥದ್ದು ನಮ್ಮ ದುರಾದೃಷ್ಟ.

Sri B. D. JATTI.—I entirely agree with the views expressed by the Hon'ble Member. It is not the intention of the Government to make use of the reserves as they please, but in cases of emergency, when we are taking up developmental activities, if it is not possible for us to get moneys either from the Government of India or from other sources, in that case only in order not to stop the developmental activities, we are to make use of the reserves. Even for that, there are certain rules and regulations by which we are to be governed. If we exceed them, then the Hon'ble Members may have a right to criticise and we will accept it.

ಶ್ರೀ ವೈ. ವೀರಪ್ಪ.—ಅದನ್ನು ಕಡೆಯಲ್ಲಿ ಪ್ರಾಜೆಕ್ಟುಗಳಿಗೆ ಬಂದಾಗ ಪ್ರಸ್ತಾಪಿಸುತ್ತೇನೆ. ರಾಜ್ಯದ ಒಂದು ಸಾಲದ ಹೊರೆಯ ಚಿಕ್ಕರನ್ನು ಸ್ವಲ್ಪ ವಿಮರ್ಶೆ ಮಾಡಿ ನೋಡಿ. 1959–60ರಲ್ಲಿ, 17 ಕೋಟಿ ಚಿಲ್ಲರೆ ಇತ್ತು ; ಆಮೇಲೆ ಸಾಲವಾಡಿದ್ದು ಈ ರೀತಿ ಇದೆ. ಪಬ್ಲಿಕ್‌ನಿಂದ–28½ ಕೋಟಿ ; ಸೆಂಟ್ರಲ್ ಗಾರ್ನಮೆಂಟಿನಿಂದ–71½ ಕೋಟಿ ; ಇನ್‌ಷೂರೆನ್ಸ್, ಸೇವಿಂಗ್ಸ್ ಬ್ಯಾಂಕ್, ಪ್ರಾವಿಡೆಂಡ್ ಫಂಡ್, ಆಧಾರಗಳು ಇತ್ಯಾದಿಯಿಂದ 18 ಕೋಟಿ, 32 ಲಕ್ಷಗಳು, ಇದೆಲ್ಲಾ 117 ಕೋಟಿ, 81 ಲಕ್ಷ ವಾಗುತ್ತದೆ ; ಒಟ್ಟು ಸಾಲವಿರುವುದು 151 ಅಥವ 152 ಕೋಟಿ ರೂಪಾಯಿ. ಸಾಲದ ಹೊರೆ ಜಾಸ್ತಿ, ಜಾಸ್ತಿಯಾಗುತ್ತಾ ಇದೆ. ಸಾಲವನ್ನು ತೀರಿಸುವುದಕ್ಕೆ ಆದಾಯ ಕಡಿಮೆಯಾಗುತ್ತಿದೆ. ಆಸ್ತಿಯ ಅಂಕಿ ಅಂಶಗಳನ್ನು ನೋಡಿದರೆ ಅಸೆಟ್ಸ್ ಕಡಿಮೆ, ಲಯಬಿಲಟೀಸ್ ಜಾಸ್ತಿ ಇದೆ. ಅಸೆಟ್ಸಿಗೂ, ಲಯಬಿಲಟೀಸಿಗೂ ಅಜಗಜಾಂತರ ವ್ಯತ್ಯಾಸವಾಗುತ್ತದೆ. ಇವೆರಡನ್ನೂ ಒಂದು ಸಮನಾದ ರೀತಿಯಲ್ಲಿ ಇಟ್ಟುಕೊಳ್ಳುವಂಥಾದ್ದು ದೇಶದ ಹಿತ ದೃಷ್ಟಿಯಿಂದ ರಾಜ್ಯ ಸರ್ಕಾರಕ್ಕೆ ಯೋಗ್ಯವೆಂದು ನಾನು ಸೂಚಿಸುತ್ತೇನೆ.

ಅನೇಕ ಪ್ರಾಜೆಕ್ಟುಗಳ ಅಭಿವೃದ್ಧಿಗೆ ಸಾಲವನ್ನು ತೆಗೆದುಕೊಂಡು ದುಡ್ಡು ಸುರಿದಿದ್ದಾರೆ. ಸಾಲವನ್ನು ತೆಗೆದುಕೊಂಡು, ನಮ್ಮ ಲಯಬಿಲಟಿ ಏನಿದೆ ನೋಡಿದರೆ ಈ ರೀತಿ ಇದೆ. ಇಂಟರೆಸ್ಟ್, ರೀಪೇಮೆಂಟ್, ಸಿಂಕಿಂಗ್ ಫಂಡ್, ಇತ್ಯಾದಿ ಕಂಪಲ್ಸರಿ ಐಟಮ್ಮುಗಳಿಗೆ ಕೊಡಬೇಕಾದಂಥಾದ್ದು–1959–60ರಲ್ಲಿ–107 ಚಿಲ್ಲರೆ, 1960–61ರಲ್ಲಿ 127 ಚಿಲ್ಲರೆ, 1961–62ರಲ್ಲಿ 137 ಚಿಲ್ಲರೆ ಲಕ್ಷ ರೂಪಾಯಿ. ಅಂಕಿಅಂಶಗಳನ್ನು ನೋಡಿದರೆ ನಮ್ಮ ಡೆಟ್ ಪೊಸಿಷನ್ ಬಹಳ ಡಿಪ್ಲೋರಬಲ್. ಆದ್ದರಿಂದ ಎಕಾನಮಿ ಮೆಷರ್ಸ್ ಬಹಳ ಸ್ಟ್ರಿಕ್ಟ್ ಆಗಿ ಏನ್‌ಫೋರ್ಸ್ ಮಾಡಬೇಕು. ಅವಾಯಿಡಬಲ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಬೇಕು. ನಮ್ಮ ಪ್ರೊಡಕ್ಷನ್ ಕೆಪ್ಯಾಸಿಟಿಯಿಂದ ಮ್ಯಾಕ್ಸಿಮಮ್ ಹಣ ಬರುವ ರೀತಿಯಲ್ಲಿ ಹಣ ಬರುವಹಾಗೆ ನೋಡಿಕೊಳ್ಳಬೇಕಾದುದು ನಮ್ಮ ಆದ್ಯಂತ ಕರ್ತವ್ಯ.

ರಾಜ್ಯಸರ್ಕಾರದವರು ಇನ್ನೊಂದು ಧೋರಣೆ ಇದೆ. ಕೇಂದ್ರ ಸರ್ಕಾರದವರು ನಮಗೆ ಈಗ ಯೋಜನೆಗಳಿಗೆ ಗ್ರಾಂಟು ಕೊಡುತ್ತಿದ್ದಾರೆಂದು, ಮುಂದಾಲೋಚನೆ ಇಲ್ಲದೆ ಮ್ಯಾಚಿಂಗ್ ಗ್ರಾಂಟು ಒದಗಿಸತಕ್ಕಂಥ ಸೌಲಭ್ಯಗಳು ನಮ್ಮಲ್ಲಿ ಇರಲಿ, ಇಲ್ಲದಿರಲಿ, ಅದನ್ನು ಒಪ್ಪಿಕೊಂಡು, ಅದ್ಭುತ ಪ್ಲಾನಿನಲ್ಲಿ ಅಡಕಮಾಡಿ, ಅನೇಕ ಸಂಧರ್ಭಗಳಲ್ಲಿ ಯೋಜನೆಗಳು ಪರಿಪೂರ್ಣವಾಗದೆ ಇರುವುದಕ್ಕೆ ಅವಕಾಶ ಕೊಡುತ್ತಾ ಇದ್ದೀರಿ. ಯಾವ ಯೋಜನೆಗಳನ್ನು ಅಳವಡಿಸಿಕೊಂಡರೆ ನಮ್ಮ ರಾಜ್ಯದ ಮುಗ್ಗಟ್ಟು ಹೋಗುತ್ತದೆಯೋ

ಮತ್ತು ಯೋಗ್ಯರೀತಿಯಲ್ಲಿ ಪ್ರತಿಫಲ ದೊರಕುತ್ತದೆಯೋ, ಅಂಥ ಯೋಜನೆಗಳನ್ನು ಮಾತ್ರ ಪ್ರಥಮತಃ ಯೋಜನೆಗಳಲ್ಲಿ ಅಳವಡಿಸಿಕೊಂಡು, ಬೇರೆ ಯಾವ ಯಾವ ಯೋಜನೆಗಳು ನಮಗೆ ಸದ್ಯಕ್ಕೆ ಏನೂ ಪ್ರತಿ ಫಲ ಕೊಡುವುದಿಲ್ಲವೋ, ಅಂಥವುಗಳನ್ನು ಮುಂದಕ್ಕೆ ಹಾಕುವುದು ಉತ್ತಮ. ಇಲ್ಲದಿದ್ದರೆ ನಿಮಗೆ ಮ್ಯಾಚಿಂಗ್ ಗ್ರಾಂಟ್ ಒದಗಿಸುವುದಕ್ಕೆ ಆಗುವುದಿಲ್ಲ.

11-00 A.M.

ಈ ದಿವಸ ದೇಶದಲ್ಲಿ ಸುಖೀರಾಜ್ಯ ಸ್ಥಾಪನೆಗಾಗಿ ಅನೇಕ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎಂದು ಆ ಕೇಂದ್ರಸರ್ಕಾರದವರೂ ಹೇಳುತ್ತಿದ್ದಾರೆ. ಇಲ್ಲಿ ಈ ರಾಜ್ಯಸರ್ಕಾರದರು ಜನರಿಗೆ ಹೇಳುತ್ತಿದ್ದಾರೆ. ಆದರೆ ಕಾರ್ಯತಃ ಆಗಿರತಕ್ಕುದ್ದೇನು? ಉದಾಹರಣೆಗೆ ನಮ್ಮ ಈ ಆಹಾರೋತ್ಪನ್ನದ ಯೋಜನೆಯನ್ನೇ ತೆಗೆದುಕೊಳ್ಳೋಣ. ಈ ವಿಚಾರದಲ್ಲಾದರೂ ನಾವು 1947 ರಿಂದ ಇಲ್ಲಿಯವರೆಗಾದರೂ ಪರಿಪೂರ್ಣತೆಯನ್ನು ಪಡೆದಿರುತ್ತೇವೆಯೇ ಎಂದರೆ ಅದಿಲ್ಲ. ಹೀಗೆ ಒಟ್ಟಿನಲ್ಲಿ ನಾವು ಯಾವ ಒಂದು ಯೋಜನೆಯನ್ನೇ ತೆಗೆದುಕೊಳ್ಳಲಿ, ನಮ್ಮ ರಾಜ್ಯಸರ್ಕಾರ ಈ ಯೋಜನೆಗಳ ಮೇಲೆ ಎಷ್ಟು ಹಣವನ್ನು ಹಾಕಿದೆಯೋ ಅಷ್ಟಕ್ಕೆ ಸರಿಯಾದ ಪ್ರತಿಫಲ ನಮಗೀಗ ಯಾವ ಯೋಜನೆಗಳಿಂದಲೂ ಬರುತ್ತಿಲ್ಲ. ಇದಕ್ಕೆ ಒಂದು ಮುಖ್ಯಕಾರಣವೇನೆಂದರೆ ಈ ನಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ರೀತಿ–ನೀತಿಗಳಲ್ಲಿ ಅಷ್ಟೊಂದು ಲೋಪದೋಷಗಳಿರುತ್ತವೆ. ಆದರೆ ಈಗ ನಮ್ಮ ಮುಂದಿರತಕ್ಕ ಹಣಕಾಸಿನ ಸಚಿವರ ಭಾಷಣದ 18–19ನೇ ಪುಟದಲ್ಲಿ ನಾವು ನಮ್ಮ ಇಂಟರ್ನಲ್ ರಿಸೋರ್ಸ್‌ಗಳನ್ನು ಹೆಚ್ಚಿಗೆ ಸ್ಟೆಪಪ್ ಮಾಡಿಕೊಳ್ಳಬೇಕು. ಇಲ್ಲವಾದರೆ ನಾವು ನಮ್ಮ ಮೂರನೆಪಂಚವಾರ್ಷಿಕ ಯೋಜನೆಯನ್ನು ಜಯಪ್ರದವಾಗಿ ಕಾರ್ಯರೂಪಕ್ಕೆ ತರುವುದಕ್ಕಾಗುವುದಿಲ್ಲವೆಂಬುದಾಗಿ ತಿಳಿಸಿದ್ದಾರೆ. ಇನ್ನು ಮುಂದಿನ ಪುಟದಲ್ಲಿ ಮತ್ತೊಂದು ಮಾತು ಏನು ಹೇಳಿದ್ದಾರೆಂದರೆ ದೇಶದಲ್ಲಿರತಕ್ಕ ಸಾರ್ವಜನಿಕರಿಗೆ "you must tighten your belt" ಎಂದು ಹೇಳಿದ್ದಾರೆ. ನಿಜ, ದೇಶದಲ್ಲಿರತಕ್ಕ ಜನರೂ ಸಹ ಈ ವಿಚಾರದಲ್ಲಿ ಸರ್ಕಾರದೊಂದಿಗೆ ಸಹಕರಿಸಿ ನಡೆಯಬೇಕಾದ್ದು ಜನರ ಆದ್ಯ ಕರ್ತವ್ಯ. ಆದರೆ ದೇಶದಲ್ಲಿರತಕ್ಕ ಜನಗಳಿಗೆ ಇಂಥ ಒಂದು ಉಪದೇಶಮಾಡುತ್ತಿರುವ ಸರ್ಕಾರ ತನ್ನ ಕರ್ತವ್ಯಗಳನ್ನು ಮತ್ತು ಕಾರ್ಯಕ್ರಮಗಳನ್ನು ಹೇಗೆ ನಡೆಸುತ್ತಿದೆಯೆಂಬುದನ್ನು ನೋಡಿದರೆ ಅದು ತೀರಾ ನಿರಾಶಾದಾಯಕವಾಗಿದೆ. ನಮ್ಮ ರಾಜ್ಯಾಡಳಿತದಲ್ಲಿ ಮಿತವ್ಯಯವನ್ನು ಜಾರಿಗೆತರತಕ್ಕ ವಿಚಾರದಲ್ಲಿ ಗೊರ್ವಾಲರವರ ವರದಿಯಲ್ಲಿ ಬಹಳ ಒಳ್ಳೆಯ ಸೂಚನೆಗಳಿವೆ. ಬಹಳ ಒಳ್ಳೆಯ ಸೂಚನೆಗಳನ್ನೊಳಗೊಂಡಿರತಕ್ಕ ಒಂದು ವರದಿಯನ್ನು ಗೊರ್ವಾಲರವರು ನಮ್ಮ ಸರ್ಕಾರಕ್ಕೆ 1956ರಲ್ಲಿ ಕೊಟ್ಟಿದ್ದಾರೆ. ಆ ವರದಿಯಲ್ಲಿ ಅವರು ಈಗ ನಮ್ಮ ರಾಜ್ಯದಲ್ಲಿರತಕ್ಕ ಮೇಲ್ಮನೆಯೇ ಬೇಕಾಗಿಲ್ಲ ಎಂತ ಹೇಳಿದ್ದಾರೆ. ಇದೆಂಥ ಸೊಗಸಾದ ಸೂಚನೆ ನಮ್ಮ ಮಿತವ್ಯಯಕ್ಕೆ! ಇಂಥ ಉಪಯುಕ್ತ ಸಲಹೆಗಳು ಬಂದರೆ ನಮ್ಮ ಸರ್ಕಾರದವರು ರಾಜ್ಯಾಂಗಕ್ಕನುಗುಣವಾಗಿ ಎಲ್ಲ ರಾಜ್ಯಗಳಲ್ಲೂ ಒಂದು ಯೂನಿಫಾರ್ಮಿಟಿಯಿರಬೇಕು. ಆ ಕಾರಣದಿಂದ ನಾವು ಈ ಪದ್ಧತಿಯನ್ನು ನಡೆಸಿಕೊಂಡು ಬರುತ್ತಿದ್ದೇವೆ ಎಂತ ಹೇಳಬಹುದು. ಆದರೆ ನಮಗೆ ತತ್ವ ಪ್ರಾಧಾನ್ಯವಲ್ಲ–ಇದರಿಂದ ದೇಶಕ್ಕೇನು ಪ್ರಯೋಜನವಿರುತ್ತೆಂಬುದನ್ನು ನೋಡಬೇಕು. ನಮ್ಮ ಸರ್ಕಾರದವರು ಕೇಂದ್ರಸರ್ಕಾರಕ್ಕೆ ಈ ಮೇಲ್ಮನೆಯಿಂದ ದೇಶಕ್ಕೇನೂ ನೇರವಾದ ಪ್ರತಿಫಲದೊರೆಯುತ್ತಿಲ್ಲವೆಂದು ವಾದಮಾಡಿ ಇದನ್ನು ರದ್ದುಮಾಡುವುದಕ್ಕೆ ಪ್ರಯತ್ನಮಾಡಬೇಕು. ಆದರೆ ಅಂಥ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಈ ಮೇಲ್ಮನೆಯಿದ್ದರೂ ಕೆಲವರಿಗೆ ಕೇವಲ ಜೀವನದಲ್ಲಿ ಜಿಗುಪ್ಸೆ ಹೊಂದಿ ಚುನಾವಣೆಗಳಲ್ಲಿ ಸೋತವರಿಗೆ–ಜೀವನೋಪಾಯ ಕಲ್ಪಿಸತಕ್ಕ ಒಂದು ಅವಕಾಶಕ್ಕಾಗಿ ಈ ಮೇಲ್ಮನೆಯನ್ನಿಟ್ಟುಕೊಳ್ಳಲಾಗಿದೆಯೆಂದು ಪರಿಗಣಿಸದೆ ವಿಧಿಯಿಲ್ಲ. ಹೀಗೆ ನಮ್ಮ ರಾಜ್ಯಾಡಳಿತದಲ್ಲಿ ಮಿತವ್ಯಯವನ್ನೂ ಸಾಧಿಸಲು ಸೊಗಸಾದ ಸಲಹೆಗಳಿರತಕ್ಕ ಅನೇಕ ವರದಿಗಳಿರುತ್ತವೆ. ಈ ಎಕಾನಮಿ ವರದಿಗಳಲ್ಲಿ ಈಗಿರತಕ್ಕ ಡಿವಿಜನಲ್ ಕಮೀಷನರ ಹುದ್ದೆಗಳು ಬೇಕಾಗಿಲ್ಲವೆಂತ ಶಿಫಾರ್ಸು ಮಾಡಿದ್ದಾರೆ. ಅಲ್ಲಲ್ಲಿ ಯೋಗ್ಯ

(ಶ್ರೀ ವೈ. ವೀರಪ್ಪ)

ಜಿಲ್ಲಾಧಿಕಾರಿಗೆ ಮತಷ್ಟು ಅಧಿಕಾರ ಹೆಚ್ಚಿಸಿದರೆ ಕೆಲಸ ಕಾರ್ಯಗಳೆಲ್ಲ ಇನ್ನಷ್ಟು ಚೆನ್ನಾಗಿ ನಡೆಯುತ್ತವೆ ಎಂತ ಹೇಳುತ್ತಿದ್ದಾರೆ ಸರ್ಕಾರದವರು ಈ ಪೋಸ್ಟುಗಳು ಇದ್ದೇ ತೀರಬೇಕೆಂದು ಹೇಳುತ್ತಿದ್ದಾರೆ. ಇಷ್ಟೇ ಅಲ್ಲದೆ ನಮ್ಮ ಸರ್ಕಾರ ಈ ದೊಡ್ಡ ದೊಡ್ಡ ಸಂಬಳದ ಅಧಿಕಾರಿಗಳಿಗೆ ಕೊಡುತ್ತಿರುವ ಸಂಬಳ-ಸಾರಿಗೆಗಳು 2,000–2,500ರೂ. ಗಳಿಗೆ ಮೇಲಿದ್ದರೂ ಅವರಿಗೆ ಮತ್ತೆ ಸ್ಪೆಷಲ್ ಪೇ ಬೇರೆ ಕೊಡುತಿದ್ದಾರೆ. ಹೀಗೆ ಪ್ರತಿಯೊಬ್ಬ ಮೇಲಾಧಿಕಾರಿಗಳಿಗೂ ಸ್ಪೆಷಲ್ ಪೇ ಕೊಡುತ್ತಾ ಬರುತ್ತಿರುವ ನೀತಿಯನ್ನು ನೋಡಿದರೆ ಈ ಸರ್ಕಾರದವರು ಅದಿನ್ನಾವ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಜಾರಿಗೆ ತರುತ್ತಾರೋ ಅದು ನನಗೆ ಗೊತ್ತಾಗುತ್ತಿಲ್ಲ. ಇಷ್ಟೇ ಅಲ್ಲ, ಈ ಉನ್ನತಮಟ್ಟದಲ್ಲಿರತಕ್ಕ ಗೆಜೆಟೆಡ್ ಆಫೀಸರುಗಳಿಗೆಲ್ಲ ಈ ಸೆಕ್ರೆಟೇರಿಯಟ್ಟಿನಲ್ಲಿ ಡೆಪ್ಯುಟೇಷನ್ ಅಲೋಯೆನ್ಸ್‌ಗಳೆಂದು ಅದನ್ನು ಬೇರೆ ಕೊಡುತ್ತಿದ್ದಾರೆ. ಈ ದಿವಸ ಈ ಡೆಪ್ಯುಟೇಷನ್ ಅಲೋಯೆನ್ಸು ಒಂದು ಆಫೀಸಿನಿಂದ ಅಥವಾ ಒಂದು ಡಿಪಾರ್ಟ್‌ಮೆಂಟಿನಿಂದ ಮತ್ತೊಂದು ಡಿಪಾರ್ಟಮೆಂಟಿಗೆ ಒಂದು ಕೆಲಸ ಮಾಡತಕ್ಕವರಿಗೆ ಅಲ್ಲದೆ ಸರ್ಕಾರದವರು ಯಾವ ಒಬ್ಬ ಅಧಿಕಾರಿಯನ್ನು ಯಾವ ಒಂದು ಇಲಾಖೆಗೆ ಕೆಲಸಮಾಡಲು ನೇಮಕ ಮಾಡಿಕೊಂಡಿರುತ್ತಾರೋ ಅಂಥ ಅಧಿಕಾರಿಗೂ ಡೆಪ್ಯುಟೇಷನ್ ಅಲೋಯೆನ್ಸನ್ನು ಕೊಡುತ್ತಿದ್ದಾರೆ. ಇದು ಸರಿಯಾದ ಪಾಲಿಸಿ ಅಲ್ಲ–ಮಿತವ್ಯಯದ ನೀತಿಯೂ ಅಲ್ಲ. ಒಟ್ಟಿನಲ್ಲಿ ಸರ್ಕಾರದವರು ಈ ದಿವಸ ಅರ್ಥವಿಲ್ಲದೆ ದೊಡ್ಡ ದೊಡ್ಡ ಅಧಿಕಾರಿಗಳಿಗೆ ವಿನಾಕಾರಣ ಕೊಡುತ್ತಿರುವ ಈ 2–3 ಅಲೋಯೆನ್ಸುಗಳನ್ನು ತಪ್ಪಿಸಿದರೆ ಇದರಿಂದಲೇ ಸರ್ಕಾರಕ್ಕೆ ಬಹಳ ಹಣ ಉಳಿತಾಯವಾಗುತ್ತದೆ. ಅಂತೂ ಈಗ ಸರ್ಕಾರದವರು ಕೊಡುತ್ತಿರುವ ಈ ದುಬಾರಿ ಅಲೋಯೆನ್ಸುಗಳನ್ನೆಲ್ಲ ತೆಗಯಬೇಕೆಂದು ಒಂದಲ್ಲ ಹತ್ತಾರು ಸಾರ್ತಿ ಈ ಸಭೆಯವರು ಒತ್ತಾಯಮಾಡುತ್ತಲೇ ಇದ್ದಾರೆ. ಹೀಗೆ ಸರ್ಕಾರಕ್ಕೆ ಉಳಿತಾಯ ಮಾರ್ಗಗಳನ್ನು ಈ ಸಭೆಯವರು ಸೂಚಿಸುತ್ತಿದ್ದಾಗ್ಯೂ ಸರ್ಕಾರ ಹೀಗೆ ತಾತ್ಸಾರ ಮನೋಭಾವನೆಯಿಂದಿರುವುದನ್ನು ನೋಡಿದರೆ ಈ ಸರ್ಕಾರದ ಆಡಳಿತದ ರೀತಿ-ನೀತಿ ಬಗ್ಗೆ ನನಗೊಂದೂ ಅರ್ಥವಾಗುತಿಲ್ಲ. ನಮ್ಮ ಸರ್ಕಾರದವರ ನೀತಿ ಒಂದು ಕಡೆ ಹೀಗಿದ್ದರೆ ಮತ್ತೊಂದು ಕಡೆ ಆಡಳಿತದಲ್ಲಿ ಮಿತವ್ಯಯವನ್ನು ಮಾಡುವುದಕ್ಕೂ ಮತ್ತು ಸರ್ಕಾರಕ್ಕೆ ವರಮಾನ ಬರತಕ್ಕ ಮಾರ್ಗಗಳನ್ನು ಸೂಚಿಸುವುದಕ್ಕೆ ರಿಸೋರ್ಸಸ್ ಮತ್ತು ಎಕನಾಮಿ ಕಮಿಟಿಯೆಂತ ಒಂದು ಕಮಿಟಿಯನ್ನು ಇತ್ತೀಚೆಗೆ ಸರ್ಕಾರದವರು ನೇಮಕ ಮಾಡಿದ್ದಾರೆ. ಇದೆಂಥ ಆಶ್ಚರ್ಯ! ಈ ಸಮಿತಿಯ ಸಲಹೆಗಳನ್ನು ಏಪ್ರಿಲ್ ತಿಂಗಳಿನಿಂದ ಜಾರಿಗೆ ತರಲು ಏರ್ಪಾಡುಗಳು ನಡೆಯುತ್ತಿದೆ ಎಂತ ಬೇರೆ ವರ್ತಮಾನ ಕೇಳುತ್ತಿದ್ದೇನೆ. ಈ ಸಮಿತಿಯವರ ವರದಿ ಸರ್ಕಾರದವರ ಕೈಗೆ ಬಂದಮೇಲೆ ಅನೇಕ ದುಂದುಗಾರಿಕೆಗಳನ್ನು ಕಡಮೆ ಮಾಡಲಾಗುತ್ತದೆಯೆಂತೆ! ಸರ್ಕಾರದಲ್ಲಿ ನಡೆಯುತ್ತಿರುವ ಅವ್ಯವಸ್ಥೆಗಳನ್ನು ಸರಿಪಡಿಸುವುದಕ್ಕೂ ಮತ್ತು ಆಡಳಿತದಲ್ಲಿ ಆಗುತ್ತಿರುವ ಅನೇಕ ದುಂದು ವೆಚ್ಚಗಳನ್ನು ತಪ್ಪಿಸಿ ಸರ್ಕಾರಕ್ಕೆ ಹೆಚ್ಚಿನ ವರಮಾನ ಬರತಕ್ಕ ಮಾರ್ಗಗಳನ್ನು ಸೂಚಿಸಲು ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಈ ಮಾನ್ಯ ಸಭೆಯಲ್ಲಿರತಕ್ಕ ವಿರೋಧ ಪಕ್ಷದ ಸದಸ್ಯರುಗಳೆಲ್ಲ ಒತ್ತಾಯ ಪಡಿಸಿದಾಗ 1957ನೇ ಸಾಲಿನಲ್ಲಿ ಇದೇ ಸಭೆಯಲ್ಲಿ ಇದೇ ಆರ್ಥಿಕ ಮಂತ್ರಿಗಳು ದಿಟ್ಟತನದಿಂದ ಅಂಥ ಪ್ರತ್ಯೇಕ ಸಮಿತಿಯ ನೇಮಕ ಅನಗತ್ಯ–ಅನಾವಶ್ಯಕವೆಂದು ಹೇಳತಕ್ಕ ಕಾಲದಲ್ಲಿ–ಈಗಾಗಲೇ ಈ ಶಾಸನ ಸಭೆಯಿಂದ ಕಾನೂನು ಬದ್ಧವಾಗಿ ರಚಿತವಾಗಿರತಕ್ಕ ಎರಡು ಸಮಿತಿಗಳು ಅಂದರೆ ಎಸ್ಟಿಮೇಟ್ಸ್ ಕಮಿಟಿ ಮತ್ತು ಪಬ್ಲಿಕ್–ಅಕೌಂಟ್ಸ್ ಕಮಿಟಿ ಎಂತ ಎರಡು ಕಮಿಟಿಗಳವೆ. ಆದುದರಿಂದ ಈ ರಿಸೋರ್ಸಸ್ ಮತ್ತು ಎಕಾನಮಿ ಬಗ್ಗೆ ಮತ್ತೊಂದು ಪ್ರತ್ಯೇಕ ಸಮಿತಿಯ ನೇಮಕ ಅನವಶ್ಯಕವೆಂದು ಹೇಳಿದ್ದರು. ಆ ದಿವಸ ಹಾಗೆ ದಿಟ್ಟತನದಿಂದ ಹೇಳಿದ ಆರ್ಥಿಕ ಸಚಿವರು ಈ ದಿವಸ ಯಾವ ಮುಖವನ್ನಿಟ್ಟುಕೊಂಡು ನಾವು ಸೂಚಿಸಿದ್ದ ವಿಷಯಗಳಿಗಾಗಿಯೇ ಈಗ ಒಂದು ಪ್ರತ್ಯೇಕ ಸಮಿತಿಯನ್ನು ನೇಮಿಸಿದರು! ಈಗ ಇಂಥ ಒಂದು ಸಮಿತಿಯನ್ನು ನೇಮಕ ಮಾಡಿರುವಾಗ ಸರ್ಕಾರದವರಿಗೆ

ನೀತಿ–ನೇಮ, ನ್ಯಾಯ, ನಿಷ್ಠೆಗಳಮೇಲೆ ಎಷ್ಟರಮಟ್ಟಿಗೆ ಅಭಿಮಾನಗಳಿವೆಯೆಂಬುದನ್ನು ರಾಜ್ಯದಲ್ಲಿರತಕ್ಕ ಪ್ರಜೆಗಳೇ ಗ್ರಹಿಸಲಿ. ಇದರ ಒಳಾಂತರ್ಯವೆಲ್ಲ ಚುನಾವಣೆಯಲ್ಲಿ ಜಯ ಗಳಿಸಲಾರದೆ ಸೋತುಹೋದ ಒಬ್ಬ ವ್ಯಕ್ತಿಗೋಸ್ಕರ ನೇಮಿಸಿದಂಥಾ ಸಮಿತಿಯಲ್ಲವೇ-ಇದು ಎಂಬುದನ್ನು ಮಾನ್ಯ ಅರ್ಥಮಂತ್ರಿಗಳು ತಮ್ಮ ಆತ್ಮಶೋಧನೆಮಾಡಿ ಈ ಪ್ರಶ್ನೆಗೆ ಉತ್ತರ ಹೇಳಬೇಕಾಗಿದೆ.

ಇನ್ನು ಈದಿವಸ ಅಗತ್ಯವಿರಲಿ–ಇಲ್ಲದಿರಲಿ ಅನೇಕ ಇಲಾಖೆಗಳಿಗೆ ಜೀಪು-ವ್ಯಾನುಗಳ ಸೌಕರ್ಯವನ್ನು ಒದಗಿಸಲಾಗಿದೆ. ಹೀಗೆ ಆ ಇಲಾಖೆಗಳಿಗೆ ಜೀಪು ಮತ್ತು ವ್ಯಾನುಗಳನ್ನೊದಗಿಸಿದ್ದರೂ ಆ ವಾಹನಗಳಲ್ಲೇ ತಿರುಗಾಡುತ್ತಿರುವ ನೌಕರುಗಳಿಗೆ ಮತ್ತೆ ಟಿ. ಎ., ಡಿ. ಎ. ಗಳನ್ನೂ ಇನ್ನೂ ಸಹ ಕೊಡಲಾಗುತ್ತಿದೆ. ಇದು ತಪ್ಪಲ್ಲವೇ ಎಂದು ಕೇಳುತ್ತೇನೆ. ಯಾರ್ಯಾರಿಗೆ ಈ ಸರ್ಕಾರ ವಾಹನ ಸೌಕರ್ಯಗಳನ್ನೊದಗಿಸಲಾಗಿದೆಯೋ ಅಂಥವರಿಗೆ ಪ್ರತ್ಯೇಕವಾಗಿ ಟಿ. ಎ., ಡಿ. ಎ. ಗಳನ್ನು ಕೊಡುತ್ತಿರುವುದು ತಪ್ಪು. ಇದು ಅರ್ಥವಿಲ್ಲದ ಆಡಳಿತ. ಯಾರಿಗೆ ಹೆಚ್ಚಿನ ಸಂಬಳ-ಸಾರಿಗೆಗಳನ್ನು ಕೊಡಲಾಗುತ್ತದೋ ಅಂಥವರು ಅವರಿಗೆ ಅಗತ್ಯವಾದ ವಾಹನ ಸೌಕರ್ಯಗಳನ್ನು ಅವರವರೇ ಒದಗಿಸಿಕೊಳ್ಳಬೇಕು. ಇದು ಅವರ ಕರ್ತವ್ಯವಾಗಿದೆ. ಅಷ್ಟೇಅಲ್ಲದೆ ಆ ವಾಹನಗಳ ರಿಪೇರಿ, ಮೈನ್ ಟನೆನ್ಸುಗಳೆಲ್ಲವನ್ನೂ ಆ ವಾಹನದ ಮಾಲೀಕರೇ ಅಂದರೆ ಆಯಾಯಾ ಅಧಿಕಾರಿ ಗಳೇ ನೋಡಿಕೊಳ್ಳಬೇಕು. ಹೀಗೆಲ್ಲ ಸರ್ಕಾರ ದುಂದುಗಾರಿಕೆಯಲ್ಲಿ ಆಡಳಿತ ನಡೆಸುತ್ತಿರುವಾಗ ನಿಜವಾಗಿಯೂ ಈ ಸರ್ಕಾರಕ್ಕೆ ಆಡಳಿತದಲ್ಲಿ ಆಗುತ್ತಿರುವ ದುಂದು ವೆಚ್ಚಗಳನ್ನು ಅಕ್ರಮವಾಗಿ ಹಣ ಪೋಲಾಗುತ್ತಿರುವದನ್ನು ತಡೆಗಟ್ಟಬೇಕೆಂಬ ಇಚ್ಛೆ ಇದೆಯೇ ಎಂಬ ಬಗ್ಗೆ ತೀರಾ ಅನುಮಾನಾಸ್ಪದವಾಗಿದೆ.

ಈ ದೃಷ್ಟಿಯಿಂದ ಸರ್ಕಾರದವರು ಈ ಅಂಶಗಳನ್ನೆಲ್ಲ ತೀಕ್ಷ್ಣವಾಗಿ ತಮ್ಮ ಗಮನಕ್ಕೆ ತೆಗೆದುಕೊಂಡು ಮುಂದೆ ಕೆಲಸಕಾರ್ಯಗಳನ್ನು ಎಚ್ಚರಿಕೆಯಿಂದ ಮಾಡಬೇಕಾಗಿರುತ್ತೆಂದು ಹೇಳುತ್ತೇನೆ. ಈ ದಿವಸ ಸಾರ್ವಜನಿಕರಿಗೆ "You must tighten your belts" ಎಂತ ಉಪದೇಶಮಾಡಲು ಹೊರಟಿರತಕ್ಕ ಸರ್ಕಾರ ಬೇರೆಯವರಿಗೆ ಹೀಗೆ ನೀತಿ ಹೇಳಲು ಹೊರಟಿರುವಾಗ ಆಡಳಿತದಲ್ಲಿ ತಾವು ಎಷ್ಟರಮಟ್ಟಿಗೆ ಮಿತವ್ಯಯದಿಂದ –ವಿವೇಕದಿಂದ ಕೆಲಸಮಾಡುತ್ತಿದ್ದೇವೆಂಬುದನ್ನು ಗಮನಿಸಬೇಡವೇ ಎಂತ ಕೇಳಬೇಕಾಗಿದೆ. ತಮ್ಮ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಸಾಧ್ಯವಿಲ್ಲದಿರುವಾಗ ಬೇರೆಯವರಿಗೆ ಉಪದೇಶಮಾಡಿದರೆ ಅಂಥ ಉಪದೇಶಕ್ಕೆಂದೂ ಮಾನ್ಯತೆ ಲಭಿಸದು. ನಾವು ಇರತಕ್ಕ ವಿಚಾರಗಳನ್ನು ಇದ್ದಂತೆಯೇ ಆಡಳಿತ ಪಕ್ಷದವರ ಗಮನಕ್ಕೆ ತಂದಾಗ ನ್ಯಾಯ–ಧರ್ಮಗಳ ದೃಷ್ಟಿಯಿಂದ ಈವಿಷಯಗಳನ್ನೆಲ್ಲಾ ಪರಿಶೀಲಿಸಬೇಕೇ ಶಿವಾಯಿ ಸುಮ್ಮನೆ ವಾದಕ್ಕೊಂದು ವಾದಮಾಡತಕ್ಕ ಶ್ರೀ ಮಾರ್ಕ ಟಾಳಿಗಾ ಅವರಂತೆ ವಾದಮಾಡಬಾರದೆಂದು ಹೇಳುತ್ತೇನೆ. ಆದರೆ ಒಂದು ವಿಚಾರವನ್ನು ಈಗಾಗಲೇ ಅನೇಕರು ಹೇಳಿದ್ದಾರೆ. ಆದರೆ ಅದನ್ನು ನಾನೂ ಸಹ ಹೇಳಬೇಕೆಂದಿದ್ದೇನೆ. ಆ ವಿಷಯವೇನೆಂದರೆ—ಈ ಆಡಳಿತ ಪಕ್ಷದವರು ದೇಶದಲ್ಲಿ ಸಮತಾವಾದ ಸಮಾಜವನ್ನು ಸ್ಥಾಪನೆಮಾಡುತ್ತೇವೆಂದು ಆ ಆವಡಿ ಅಧಿವೇಶನದಿಂದಲೂ ಬಹಳ ಅವಿಚ್ಛಿನ್ನವಾಗಿ ಹೇಳುತ್ತಲೇ ಬರುತ್ತಿದ್ದಾರೆ. ಆದರೆ ಹಾಗೊಂದು ಕಡೆ ಆ ಪ್ರಚಾರ ಮಾಡುತ್ತಿರುವಾಗಲೇ ಮತ್ತೊಂದು ಕಡೆಯಿಂದ ನಮ್ಮ ಆಡಳಿತದಲ್ಲಿ ಈ ಐ. ಎ. ಎಸ್. ಮತ್ತು ಐ. ಪಿ. ಎಸ್ ಅಧಿಕಾರಿಗಳಿಲ್ಲದಿದ್ದರೆ ನಮ್ಮ ಆಡಳಿತವೇ ನಡೆಯುವುದಿಲ್ಲ ಎನ್ನತಕ್ಕ ಒಂದು ಮನೋಭಾವನೆಯನ್ನು ಬೇರೆ ಸತತವಾಗಿ ಬೆಳೆಸಿಕೊಂಡು ಬರುತ್ತಿದ್ದಾರೆ. ಈ ಎರಡು ಅಭಿಪ್ರಾಯಗಳೂ ಒಂದಕ್ಕೊಂದು ವಿರೋಧಾಭಾಸವಾಗಿರುತ್ತೆ. ಇದೇ ಸಭೆಯಲ್ಲಿ ಈ ಹಿಂದೆ ಈ ನೌಕರರ ಸಂಬಳ-ಸಾರಿಗೆಗಳು ನೂರು ರೂಪಾಯಿಗಳಿಗೆ ಯಾರಿಗೂ ಕಡಮೆ ಇಲ್ಲದಂತೆಯೂ ಒಂದು ಸಾವಿರ ರೂಪಾಯಿಗಳ ಸಂಬಳಕ್ಕಿಂತ ಹೆಚ್ಚಿಗೆ ಯಾರಿಗೂ ಸಂಬಳ–ಸಾರಿಗೆಗಳಿರಬಾರದೆಂಬ ನಿರ್ಣಯವನ್ನು ಪಾಸ್ ಮಾಡಲಿಲ್ಲವೇ? ಕೇವಲ ಹೆಚ್ಚು ಸಂಬಳ-ಸಾರಿಗೆಗಳೇನೂ ದೇಶಾಭಿಮಾನದ ಚಿಹ್ನೆಗಳಲ್ಲ. ದೇಶ ಕಷ್ಟದಲ್ಲಿರುವಾಗ ಪ್ರತಿಯೊಬ್ಬರೂ ತಮ್ಮ ದೇಶದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಸ್ವಲ್ಪ ತ್ಯಾಗಮಾಡಲು ಸಿದ್ಧರಾಗಿರಲೇಬೇಕು. ದೇಶಪ್ರೇಮಕ್ಕಿಂತ ಹೆಚ್ಚಿನ ಸಂಬಳವಿರಲಾರದು....

ಶ್ರೀ ಬಿ. ಡಿ. ಜತ್ತಿ.— ಆದರೆ ದೊಡ್ಡ ದೊಡ್ಡ ಭೂಪಾಲೀಕರು ಮಾತ್ರ ಕೆಳಗಿಳಿಯಬಾರ ದೆಂದು ಎಂತ ಹೇಳುತ್ತಿದ್ದಿರೋ ಹೇಗೆ?

ಶ್ರೀ ವೈ. ವೀರಪ್ಪ.—ಈ ದಿವಸ ಆಡಳಿತ ನಡೆಸುತ್ತಿರುವ ಮಂತ್ರಿಮಂಡಲ ತನ್ನ ನಡೆ-ನುಡಿ, ತನ್ನ ಆಡಳಿತ ವ್ಯವಸ್ಥೆ—ಇವುಗಳನ್ನೆಲ್ಲ ಸರಿಪಡಿಸಿಕೊಳ್ಳದೆ ಈ ಸರ್ಕಾರ ದೇಶದಲ್ಲಿರತಕ್ಕ ಜನಗಳ ಮುಂದೆ ಯಾವ ತತ್ವಗಳನ್ನು ಹೇಳಿದರೂ ಅದಕ್ಕೆ ಖಂಡಿತ ಜನರು ತಲೆ ಬಾಗುಪುದಿಲ್ಲ. ಸರ್ಕಾರ ದವರ ನಡೆ-ನುಡಿ, ನೀತಿ-ನೇಮ ಮತ್ತು ಆಡಳಿತ ವ್ಯವಸ್ಥೆಗಳೆಲ್ಲ ದೋಷರಹಿತವಾಗಿದ್ದರೆ ಮಾತ್ರ ಸಾರ್ವಜನಿಕರು ಸರ್ಕಾರದ ತತ್ವಗಳಿಗೆಲ್ಲ ಗಾಳಿ ಬೀಸಿವಾಗ ಹುಲ್ಲು ತಲೆ ಬಾಗುವಂತೆ ತಲೆ ಬಾಗುತ್ತಾರೆ. ಆಡಳಿತ ಹದಗೆಟ್ಟಿರುವಾಗ ಜನರೆಂದೂ ತಲೆ ಬಾಗುವುದಿಲ್ಲ.

ಅಧ್ಯಕ್ಷರು.— ನೀವು ಮರವೂ ಅಲ್ಲ, ಹುಲ್ಲೂ ಅಲ್ಲ.

ಶ್ರೀ ವೈ. ವೀರಪ್ಪ.—ಆದುದರಿಂದ ಮದ್ರಾಸ್ ಲೆಜಿಸ್ಲೇಚರಿನಲ್ಲಿ ಕೊಟ್ಟಿರುವಂತೆ ಇಲ್ಲಿಯೂ 250-500 ರೂಪಾಯಿ ಸ್ಕೇಲನ್ನು ಕೊಡಬೇಕು. ಇದಲ್ಲದೆ ಇಕ್ವಿಪ್‌ಮೆಂಟ್ ದರಗಳು ಕೂಡ ಆಶಾದಾಯಕವಾಗಿಲ್ಲ. ಬೇರೆ ಕಡೆಗಳಿಂದ ಬಂದಿರುವ ರಿಪೋರ್ಟರುಗಳು ಬೊಂಬಾಯಿ ಮತ್ತು ಮದ್ರಾಸ್‌ಗಳಲ್ಲಿರುವಂತೆ ಸಂಬಳಗಳನ್ನು ಪಡೆಯುತ್ತಿದ್ದಾರೆ. ನಮ್ಮ ಹಳೆಯ ಮೈಸೂರಿಗೆ ಸೇರಿದ ರಿಪೋರ್ಟರುಗಳಿಗೂ ಆ ಸೌಲಭ್ಯವನ್ನು ಕೊಡಿ, ಯಾವ ವ್ಯತ್ಯಾಸವನ್ನೂ ಮಾಡಬೇಡಿ. ಈ ವಿಚಾರವನ್ನು ಮಾನ್ಯ ಸ್ಪೀಕರ್ ಅವರೂ ಮಂತ್ರಿಮಂಡಲದವರೂ ಪರಿ ಶೀಲನೆ ಮಾಡಿ, ಸೂಕ್ತವಾದ ರೀತಿಯಲ್ಲಿ ಸಂಬಳಗಳ ಸ್ಕೇಲನ್ನು ಕೊಡಬೇಕು ಎಂದು ಹೇಳು ತ್ತೇನೆ. ಮದ್ರಾಸ್‌ನಲ್ಲಿರುವ ಸ್ಕೇಲುಗಳನ್ನೇ ಇಲ್ಲಿಯವರಿಗೂ ಕೊಡುವುದು ಸೂಕ್ತವೆಂದು ತಿಳಿದುಕೊಂಡಿದ್ದೇನೆ.

ಷೆಡ್ಯೂಲ್ಡ್ ಜಾತಿಗಳ ಬಗ್ಗೆ ಲಕ್ಷಾಂತರ ರೂಪಾಯಿ ಕೋಟ್ಯಾಂತರ ರೂಪಾಯಿ ಖರ್ಚುಮಾಡು ತ್ತಿದ್ದೀರಿ. ಇವರ ಸಂಖ್ಯೆ 40 ಲಕ್ಷ ಇವೆ ಎನ್ನುವ ಆಧಾರದ ಮೇಲೆ ಕೇಂದ್ರ ಸರ್ಕಾರ ಮತ್ತು ರಾಜ ಸರ್ಕಾರಗಳಿಂದ ಬೇಕಾದಷ್ಟು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ದೇಶದಲ್ಲಿ ಈಗ ಷೆಡ್ಯೂಲ್ಡ್ ಜಾತಿಯವರಿಗೆ 60 ಹಾಸ್ಟೆಲುಗಳು ತಯಾರಾಗಿವೆ. ಇದರಿಂದ ಅವರಲ್ಲಿ ಒಂದೆರಡು ಕೋಮಿ ನವರಿಗೆ ಮಾತ್ರ ಸಹಾಯವಾಗುತ್ತದೆ. ಇದು ತಪ್ಪು. ಮುಂದುವರಿದ ಜನಾಂಗದವರು ನಿಮ್ನ ತರಗತಿಯವರನ್ನು ಶೋಷಣೆ ಮಾಡುತ್ತಿದ್ದಾರೆಂದು ಹೇಳುತ್ತಿದ್ದರು. ಷೆಡ್ಯೂಲ್ಡ್ ಪಂಗಡದಲ್ಲಿ ಕೊರಮರು, ಕೊರಚರು, ಲಂಬಾಣಿಯವರು ಮುಂತಾದವರೆಲ್ಲ ಬರುತ್ತಾರೆ. ಆದರೆ ಇವರಿಗೆ ಸರಿಯಾದ ರೀತಿಯಲ್ಲಿ ಸೌಲಭ್ಯಗಳು ದೊರೆಯುತ್ತಿಲ್ಲ. ಇಂತಹವರಿಗೂ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕು. ಈಗ ದೇಶದಲ್ಲಿ ಆಗಿರುವ 60 ಹಾಸ್ಟೆಲುಗಳಿಂದ ಒಡ್ಡರು, ಕೊರಚರು ಮುಂತಾದ ವರಿಗೆ ಸೌಲಭ್ಯಗಳು ದೊರತಿಲ್ಲವೆಂದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಇದನ್ನು ಸರ್ಕಾರ ಯೋಚನೆಮಾಡಿ ಇವರಿಗೂ ಸೌಲಭ್ಯಗಳನ್ನು ಕೊಡಬೇಕೆಂದು ಹೇಳುತ್ತೇನೆ. ಅರಸೀಕೆರೆಯ ಹಬ್ಬನಘಟ್ಟ ಎಂಬಲ್ಲಿ ಒಡ್ಡರ ಜನಾಂಗದವರು ಒಂದು ಕಾಲೋನಿ ಮಾಡಿಕೊಡಿರಿ ಎಂದು ಒತ್ತಾಯ ಮಾಡುತ್ತಿದ್ದಾರೆ. ಆದರೆ ಇದುವರೆಗೂ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಸಂಬಂಧ ಪಟ್ಟ ಮಾನ್ಯ ಸಚಿವರು ಈ ಬಗ್ಗೆ ನಿಗಾ ಕೊಟ್ಟು ಸೌಲಭ್ಯಗಳನ್ನು ಒದಗಿಸಿಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಒಟ್ಟಿನಲ್ಲಿ ಆಡಳಿತ ಸೂತ್ರವನ್ನು ಹಿಡಿದಿರುವವರು ಯಾವುದಾದರೂ ಒಂದು ಸಲಹೆ ಬಂದರೆ ಅದನ್ನು ತೀಕ್ಷ್ಣವಾಗಿ ಮನಸ್ಸಿಗೆ ತೆಗೆದುಕೊಂಡು ರಾಜ್ಯದ ಹಿತದೃಷ್ಟಿಯಿಂದ ಅದನ್ನು ಪರಿಶೀಲಿ ಸುವುದು ಒಳ್ಳೆಯದೆಂದು ತಿಳಿದುಕೊಂಡು ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ನನಗೆ ಸ್ವಲ್ಪ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ (ಬಾಗೇವಾಡಿ).—ಅಧ್ಯಕ್ಷರೇ, 1961-62ರ ಆಯವ್ಯಯ ಪಟ್ಟಿಯನ್ನು ನಮ್ಮ ಸರ್ಕಾರದವರು ಈ ಸಭೆಯಲ್ಲಿ ಇಟ್ಟಿದ್ದಾರೆ. ಅದನ್ನು ಅನುಮೋದಿಸುತ್ತೇನೆ, ಅಭಿವೃದ್ಧಿ ಕೆಲಸಗಳಿಗಾಗಿ ಹಣ ಖರ್ಚುಮಾಡಿದ್ದಾರೆ. ಎಲ್ಲ ಕಡೆಯೂ ನೀರಿನ ಸೌಕರ್ಯಕ್ಕಾಗಿ ಬಾವಿ, ಶಾಲಾ ಕಟ್ಟಡ, ಸಮಾಜ ಕಲ್ಯಾಣ, ರಾಷ್ಟ್ರೀಯ ವಿಸ್ತರಣೆ ಯೋಜನೆ ಇಂಥವುಗಳಿಗೆಲ್ಲ ಹೆಚ್ಚಿನ ಖರ್ಚು ಮಾಡುವುದರ ದೆಸೆಯಿಂದ ನಾನು ಸರ್ಕಾರಕ್ಕೆ ಅಭಿವಂದನೆಗಳನ್ನು ಸಲ್ಲಿಸಿ ಕೆಲವು ಸೂಚನೆ ಕೊಡಬಯಸುತ್ತೇನೆ.

ಗ್ರಾಮಸ್ಥರ ಜೀವನ ಬಹಳ ದುಸ್ತರವಾದುದು. ಒಕ್ಕಲುತನ ಮಾಡುವವರಿಗೆ ಸೌಕರ್ಯ ನೀಡುವುದು ಸರ್ಕಾರದ ಕರ್ತವ್ಯವಿದೆ. ಇವರಿಗೆ ಬಾವಿಗಳನ್ನು ಕೊಡುವ ಸಲುವಾಗಿ 500 ರೂಪಾಯಿ ಸಬ್ಸಿಡಿ ಕೊಡುವುದು ಒಳ್ಳೆಯ ಸಂಗತಿ. ಆದರೆ ಈ ಹಣ ಏಪ್ರಿಲ್ ಕೊನೆಗೆ ಬಂದು ಅದು ಉಳಿಯದೆ ರೈತರಿಗೆ ಅನುಕೂಲವಾಗುವುದಿಲ್ಲ. ನಮ್ಮ ಜಿಲ್ಲೆಯ ವಿಷಯ ಮಾತನಾಡಬೇಕಾದರೆ, ಬಿಜಾಪುರ ಜಿಲ್ಲೆಯಿಂದ ಬಂದಂಥ 4000 ಅರ್ಜಿಗಳಲ್ಲಿ ಕೇವಲ 1,100 ಜನರಿಗೆ ಬಾವಿಗಾಗಿ ಹಣ ಕೊಟ್ಟಿದ್ದಾರೆ. ಬಾವಿಗೆ ಇನ್ನೂ ಹೆಚ್ಚು ಜನರಿಗೆ ಹಣವನ್ನು ಕೊಡಬೇಕು. ಸಾಲ ಕೊಡುವಾಗ ಭೂಮಿಯ ಕಿಮ್ಮತ್ತು 1,000 ರೂಪಾಯಿದ್ದರೆ, 500 ರೂಪಾಯಿ ಕಿಮ್ಮತ್ತು ಹಾಕಿ, ಅದರ ಆಧಾರದ ಮೇಲೆ ಸಾಲವನ್ನು ಕೊಡುತ್ತಾರೆ. ಮತ್ತು 500 ರೂಪಾಯಿ ಸಬ್ಸಿಡಿ ಸಹ ಕೊಡುತ್ತಾರೆ. ಭೂಮಿಯಲ್ಲಿ ಬಾವಿಯನ್ನು ತೆಗೆದರೆ ಹತೋಟಿ ಸರ್ಕಾರಕ್ಕೆ ಇದ್ದೇ ಇರುತ್ತದೆ. ಆದ್ದರಿಂದ ಬಾವಿಯನ್ನು ತೆಗೆದನಂತರ ಭೂಮಿಯ ಬೆಲೆ ಏನಾಗುತ್ತದೆ ಅದನ್ನು ಹಿಡಿದು ಒಕ್ಕಲುತನ ಮಾಡುವವರಿಗೆ ತಗಾಯಿ ಸಾಲ ಕೊಟ್ಟರೆ, ಅವನಿಗೆ ಬಾವಿ ತೆಗೆಸುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಭೂಮಿಯ ಕಿಮ್ಮತ್ತನ್ನು ಹೆಚ್ಚು ಹಿಡಿದು ಬಾವಿಯನ್ನು ತೆಗೆಯಲು ಹೆಚ್ಚಿನ ಸಾಲ ಕೊಡಬೇಕೆಂದು ಹೇಳುತ್ತೇನೆ.

ವ್ಯವಸಾಯಗಾರನಿಗೆ ಬೇಕಾದ ಹಳಿ ಮತ್ತು ಇತರ ಉಪಕರಣಗಳು ಸರಿಯಾಗಿ ಸಿಕ್ಕುವುದಿಲ್ಲ. ಸುಗ್ಗಿಕಾಲಕ್ಕೆ ಇವೆಲ್ಲ ಬೇಕಾಗುತ್ತದೆ. ಜಿಂಕ್‌ಷೀಟ್‌ಗಳು ದೊರೆಯದೆ ಬಹಳ ತೊಂದರೆಯಾಗಿದೆ. ವ್ಯವಸಾಯದ ಉಪಕರಣಗಳು ಮತ್ತು ಜಿಂಕ್‌ಷೀಟ್‌ಗಳನ್ನು ವ್ಯವಸಾಯಗಾರರಿಗೆ ಒದಗಿಸಿಕೊಟ್ಟರೆ ಬಹಳ ಸಹಾಯವಾಗುತ್ತದೆ.

ವ್ಯವಸಾಯಗಾರರಿಗೆ ಒಳ್ಳೆಯ ಬಿತ್ತನೆ ಬೀಜ ಸಿಕ್ಕಬೇಕು. ನಮ್ಮ ಕಡೆ ಜೋಳದ ಬಿತ್ತನೆಯನ್ನು ಕೊಡಬೇಕು. ಒಂದೊಂದು ಎಕರೆಗಿಂತ ಹೆಚ್ಚು ಭೂಮಿ ಇದ್ದವರೆ ಒಂದೊಂದು ಎಕರೆಗೆ ಕೊಟ್ಟಿದ್ದಾರೆ. ಈ ರೀತಿ ಮಾಡಿದರೆ ರಾಶಿ ಮಾಡುವುದು ತೊಂದರೆಯಾಗುತ್ತದೆ. ಹತ್ತಿಪ್ಪತ್ತು ಎಕರೆ ಭೂಮಿಗೆ ಕೊಟ್ಟರೆ ರಾಶಿ ಮಾಡಿ ಸರ್ಕಾರಕ್ಕೆ ಕೊಡಲಿಕ್ಕೆ ಅನುಕೂಲವಾಗುತ್ತದೆ. ಇದನ್ನು ಗಮನಿಸಬೇಕು.

ಬಿಜಾಪುರದಲ್ಲಿ ಒಂದು ಜಿಲ್ಲಾ ಆಸ್ಪತ್ರೆಯಿದೆ. Male Nurses ಶಿಕ್ಷಣಕ್ಕೆ ತೆಗೆದುಕೊಳ್ಳುವಾಗ ಮೆಟ್ರಿಕ್ ಆಗಿದ್ದು ಒಂದು ವರ್ಷದ ತನಕ ಅಭ್ಯಾಸ ಮಾಡಿದಂಥವರನ್ನು ಅನುಭವವಿರುವವರನ್ನು ತೆಗೆದುಕೊಳ್ಳುವುದಿಲ್ಲ. ಇವರನ್ನು ಇಂಟರ್‌ವ್ಯೂಗೆ ಕರೆದಾಗ ಬಿಜಾಪುರದಿಂದ ಬಂದಿದ್ದವರಲ್ಲಿ ಇಲ್ಲಿಯವರು ಎರಡು ಮಂದಿಯನ್ನು ಮಾತ್ರ ತೆಗೆದುಕೊಂಡು, ಉಳಿದವರನ್ನು ನಾಲ್ಕನೇ ಇಯತ್ತೆ ಆದವರನ್ನು ತೆಗೆದುಕೊಂಡಿದ್ದಾರೆ. ಅವರಿಗೆ ಅಭ್ಯಾಸವಿಲ್ಲ. ಇಂಥವರನ್ನೆಲ್ಲ ತೆಗೆದುಕೊಂಡಿದ್ದಾರೆ ? ಇಲ್ಲಿಂದ ಆ ಭಾಗಕ್ಕೆ ಹಾಕುವ ಜನರಾಡುವ ಮಾತು ಅಲ್ಲಿಯವರಿಗೆ ತಿಳಿಯುವ ಹಾಗೆ ಇಲ್ಲ. ಅರ್ಧಂಬರ್ಧ ಕನ್ನಡ ಬರುವವರನ್ನು ಅಲ್ಲಿಗೆ ಹಾಕುತ್ತಾರೆ. ಇದರಿಂದ ಕೆಲಸ ಹೇಗೆ ನಡೆಯಬೇಕು? ಮಾನ್ಯ ಮಂತ್ರಿಗಳು ಇದರ ಕಡೆ ಲಕ್ಷ್ಯ ಕೊಟ್ಟು ಅಲ್ಲಿಯ ಮಂದಿಯನ್ನೇ male nurse ಮಾಡಿದರೆ ಒಳ್ಳೆಯದಾಗುತ್ತದೆ.

(ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ)

ನಮ್ಮ ತಾಲ್ಲೂಕಾದ ಬಾಗೇವಾಡಿಯ ವಿಷಯ ಹೇಳಬೇಕಾದರೆ ಅಲ್ಲಿ ಹೆರಿಗೆ ಆಸ್ಪತ್ರೆಯಲ್ಲಿ ನರ್ಸ್ ಇಲ್ಲ. ಅಲ್ಲಿಯವರು ಬಿಜಾಪುರಕ್ಕೆ ಅಥವಾ ಬಾಗಲಕೋಟೆಗೆ ಹೋಗಬೇಕು. ಇಂಥ ಪರಿಸ್ಥಿತಿ ಇರುವ ದೆಸೆಯಿಂದ ಅಲ್ಲಿಗೆ ಒಬ್ಬ ಲೇಡಿ ಡಾಕ್ಟರರನ್ನು ಹಾಕಬೇಕು. ಕೊಲ್ಹಾರ ಗ್ರಾಮದ ಜನಸಂಖ್ಯೆ 6,000 ಇದೆ. ಈ ಗ್ರಾಮದ ಮತ್ತು ಇದರ ಸುತ್ತಮುತ್ತಲ ಜನಗಳಿಗೆ ಹೆರಿಗೆ ಆಸ್ಪತ್ರೆ ಸಾಕರ್ಯವಿಲ್ಲ. ಸುಮಾರು ನೂರಾರು ಹಳ್ಳಿಗಳಿಗೆ ಹೆರಿಗೆ ಆಸ್ಪತ್ರೆ ಸೌಕರ್ಯವಿಲ್ಲ. ಹೊಳೆಬಿದ್ದಾಗ ಅಲ್ಲಿಯ ಜನರು ಬಿಜಾಪುರಕ್ಕೆ ಅಥವಾ ಬಾಗೇವಾಡಿಗೆ ಹೋಗುವುದು ಶಕ್ಯವಿಲ್ಲ. ಆದುದರಿಂದ ಕೊಹಲ್ಲಾರ ಗ್ರಾಮಕ್ಕೆ ಒಂದು ಹೆರಿಗೆ ಆಸ್ಪತ್ರೆಯನ್ನು ಕೊಡಬೇಕು. ಬಿಜಾಪುರ ಜಿಲ್ಲೆ ಬರಗಾಲ ಪೀಡಿತವಾದ ಜಿಲ್ಲೆ. ಅಲ್ಲಿ ಬೇಕಾದಷ್ಟು ಕೆಲಸವನ್ನು ಮಾಡಿದ್ದೀರಿ. ಇಲ್ಲವೆನ್ನುವ ಹಾಗೆ ಇಲ್ಲ. ಬಿಜಾಪುರದಲ್ಲಿ ಬೆಳೆಯುವ ಹತ್ತಿ ಎಲ್ಲ ಸೋಲಾಪುರ, ಬೊಂಬಾಯಿ ಪ್ರಾಂತ್ಯ ಮತ್ತು ಗೋಕಾಕ್ ಈ ಊರುಗಳಿಗೆ ಹೋಗಬೇಕಾಗಿದೆ. ಬಿಜಾಪುರದಲ್ಲಿ ಒಂದು ನೂಲಿನ ಗಿರಣಿ ಇಲ್ಲ. ನೂಲಿನ ಗಿರಣಿಯನ್ನು ಸ್ಥಾಪನೆ ಮಾಡಲು ಸುಮಾರು ಹಣವನ್ನು ಕೂಡ ಸಂಗ್ರಹ ಮಾಡಿದ್ದಾರೆ. ಸರ್ಕಾರ ಈ ವಿಷಯಕ್ಕೆ ಲಕ್ಷ್ಯಕೊಟ್ಟು ಬಿಜಾಪುರದಲ್ಲಿ ಒಂದು ನೂಲಿನ ಗಿರಣಿಯನ್ನು ಸ್ಥಾಪನೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ನಮ್ಮ ಮುಂಬೈ ಕರ್ಣಾಟಕದೊಳಗೆ ಮನೆಗಳ ಸಾಕರ್ಯವಿಲ್ಲ. ಮನೆಗಳನ್ನು ಮಾಡುವ ದೆಸೆಯಿಂದ ಸರ್ಕಾರದವರು ಸಹಾಯ ಮಾಡಬೇಕು. ಬಾಗೇವಾಡಿಯಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟ್ ಇದೆ. ಮುನಸೀಫ್ ಕೋರ್ಟ್ ಮಂಜೂರು ಆಗಿದೆ. ಮ್ಯಾಜಿಸ್ಟ್ರೇಟರು ಬಂದರೆ ಆರು ತಿಂಗಳ ತನಕ ಮನೆ ಸಿಕ್ಕುವುದಿಲ್ಲ. ಬಿಜಾಪುರದಿಂದ ದಿನಾ ಬಂದು ಹೋಗುತ್ತಾರೆ. ಸರ್ಕಾರದ ವತಿಯಿಂದ ಕೆಲವು ಯಿಮಾರತಿಗಳನ್ನು ಕಟ್ಟಿಸಿದರೆ ಮಾಜಿಸ್ಟ್ರೇಟ್, ಮುನಸೀಫ್ ಯಾರೇ ಬರಲಿ ನಿಲ್ಲಲಿಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಸರ್ಕಾರ ಲಕ್ಷ್ಯ ಕೊಡಬೇಕು.

ನಮ್ಮ ಭಾಗದ ಹಳ್ಳಿಗಳ ಕಡೆಯಲ್ಲಿ ಲೈಟಿಗೆ ಬಹಳ ತೊಂದರೆಯಾಗಿತ್ತು. ಆದರೆ ಈಗ ನಮ್ಮ ಸರಕಾರದವರು ಲೈಟು ಕೊಡಲು ಬಹಳವಾಗಿ ಕೆಲಸ ಮಾಡಿದ್ದಾರೆ. ಬಾಗಲಕೋಟೆಗೆ ಮತ್ತು ಬಿಜಾಪುರಕ್ಕೆ ಲೈಟನ್ನು ಕೊಡಲು ಶರಾವತಿಯ ಯೋಜನೆಯಾದ ಮೇಲೆ ಮಾಡುತ್ತಾರೆಂದು ಹೇಳುತ್ತಿದ್ದಾರೆ. ಹಳೆಯ ಮೈಸೂರಿನಲ್ಲಿ ಮತ್ತು ಹೊಸ ಮೈಸೂರಿನಲ್ಲಿ ಕೈಮಗ್ಗಗಳಿವೆ. ಹಳೆಯ ಮೈಸೂರಿನಲ್ಲಿ ಈ ಮಗ್ಗಗಳಿಗೆ ಲೈಟಿನ ಅನುಕೂಲಕ್ಕೆ ನಮ್ಮ ಭಾಗದಲ್ಲಿ ಲೈಟಿನ ಅನುಕೂಲವಿಲ್ಲ. ಈ ಅನುಕೂಲ ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಬಿ. ಡಿ. ಜತ್ತಿ.—ಶರಾವತಿ ಯೋಜನೆ ಬಂದರೂ ಕೈಮಗ್ಗಗಳೂ ಇರುತ್ತವೆ, ಕೈಮಗ್ಗಗಳನ್ನು ಪವರ್ ಲೂಮಾಗಿ ಮಾಡಿಕೊಳ್ಳಬಹುದು. ಕೈಮಗ್ಗಗಳು Diesel engineನ ಸಹಾಯದಿಂದ ಕೆಲಸ ಮಾಡಬಹುದು. ವಿದ್ಯುಚ್ಛಕ್ತಿ ಹೆಚ್ಚಾಗಿ ಬಂದರೆ ಸರಕಾರದವರು ಕೊಡಬಹುದು, ಅದರಲ್ಲೇನೂ ತೊಂದರೆ ಇಲ್ಲ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ನಮ್ಮ ಚೀಫ್ ಮಿನಿಸ್ಟರವರು ಹೇಳಿದ್ದು ನಮಗೆ ಬಹಳ ಸಂತೋಷವಾಯಿತು. ನಮ್ಮ ಜನಕ್ಕೂ ಬಹಳ ಸಂತೋಷವಾಯಿತು. ನಮ್ಮ ಹಳೆಯ ಮೈಸೂರಿನಲ್ಲಿ ಎಲ್ಲಿ ನೋಡಿದರೂ ಬಾವಿಗಳು, ಕೆರೆ ಕಟ್ಟೆಗಳೂ ಆಗಿದೆ. ಅದರಂತೆ ನಮ್ಮ ಕಡೆಗೂ ಸರಕಾರ ಲಕ್ಷಕೊಟ್ಟು ಮಾಡುತ್ತಿರುತ್ತಾರೆ. ನಮ್ಮ ಕರ್ನಾಟಕ ರಾಜ್ಯ ಬಂದದ್ದು ನಮಗೆ ಎಷ್ಟೋ ಚೆಲೋ ಆಯಿತು. ಅದರಲ್ಲೂ ನಮ್ಮ ಕಾಂಗ್ರೆಸ್ಸು ಸರಕಾರ ಬಂದದ್ದು ಬಹಳ ಒಳ್ಳೆಯದು. ಅದರಲ್ಲೂ ಬ್ಯಾಕ್ ವರ್ಡ್ ಕ್ಲಾಸಿನವರಿಗೆ ನಮ್ಮ ಸರಕಾರ ಬಹಳ ಮದದ್ದು ಮಾಡುತ್ತಿರುವುದು ಬಹಳ ಸಂತೋಷವಾಗಿದೆ. ಇನ್ನೂ ಹೆಚ್ಚಾಗಿಯೂ ಮುಂದೆ ಮಾಡುತ್ತಾರೆ.

ಶ್ರೀ ಜಿ. ವೆಂಕಟೇಗೌಡ.— ಹಿಂದುಳಿದ ಬ್ಯಾಕ್‌ವರ್ಡ್ ಕ್ಲಾಸಿಗೆ ಏನೂ ಕೊಟ್ಟಿಲ್ಲ ಎಂದು ತಾವು ಹೇಳಿದ ಅರ್ಥಬರುತ್ತದೆ.

ಶ್ರೀ ಬಿ. ಡಿ. ಜತ್ತಿ.— ಅದು ತಮ್ಮ ದೃಷ್ಟಿದೋಷ. ಮಾನ್ಯಸದಸ್ಯರು ಅವರಿಗೆ ಕಂಡದ್ದನ್ನು ಹೇಳುತ್ತಿದ್ದಾರೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.— ಹರಿಜನರಿಗೆ ಎಷ್ಟೋಕಡೆಯಲ್ಲ ಮದದ್ ಕೊಟ್ಟಿದ್ದಾರೆ. ನಮ್ಮ ಕಡೆಯಲ್ಲಿ ಎಲ್ಲಾ ಕೊಡುತ್ತಿದ್ದಾರೆ. ನಾವು ಎಂ. ಎಲ್ ಎ. ಆಗಿರುವುದರಿಂದ ಎಲ್ಲ ಕಡೆಯೂ ಆಡ್ಡಾಡಿನೋಡಿ ಪಡೆಯುತ್ತಿದ್ದೇವೆ. ನೀವು ಎಲ್ಲಿಯೂ ಹೋಗಿನೋಡದೆ ಮನೆಯಲ್ಲೇ ಕೂತರೆ ಏನು ಸಹಾಯ ಸಿಗುತ್ತದೆ? ನೀವೇ ಹೋಗಿ ಕೇಳಿದರೆ ಆವರಿಗೂ ಕೊಡುತ್ತಾರೆ (ನಗು).

(*Interruption in Marathi*)

ನಮ್ಮ ಈ ಮೈಸೂರು ರಾಜ್ಯ ಇನ್ನೂ ಸಂಪತ್ತುಳ್ಳ ರಾಜ್ಯವಾಗಲಿ ಎಂದು ಹಾರೈಸಿ ಈ ಮುಂಗಡ ಪತ್ರವನ್ನು ಅನುಮೋದಿಸಿ, ಸ್ಪೀಕರ್‌ರವರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅವರನ್ನು ವಂದಿಸಿ ಈ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri C. M. ARUMUGHAM (K.G.F.).—Mr. Speaker Sir, I am thankful to you Mr. Speaker, for giving me an opportunity to speak on the Budget.

Sir, at the very outset, I would like to submit that some of the areas of the State have been neglected in the present Cabinet. Sir, in 1956, when integration took place, we had two States—one was Coorg and another was ex-Mysore. There were two different Governments and we had territories coming from Bombay and Madras, Part A States. These two States were part A and Part C States. If you take into consideration the formation of the Cabinet, I can definitely say that Coorg has been completely neglected by the present Government. I think I need not remind my friend, the Chief Minister, what happened when Jamakhandi was merged with Bombay, there was a representation to the then Bombay Government and as a result of that, the then Chief Minister of Jamakhandi was taken as Deputy Minister of Bombay. People of Jamakhandi were very happy. Even now, they are happy, their representative is the Chief Minister of this State. But Coorg has been neglected.

AN HON'BLE MEMBER.—You are pleading on behalf of Coorg!

Sri C. M. ARUMUGHAM.—I am speaking on behalf of the entire State. It reminds me of a story depicting two monkeys quarrelling between them and allowing the fruits of their labours being taten away by somebody else. My friends from Coorg Mr. Karumbaiya and Mr. K. Mallappa fighting on the Harangi Project, they have left their places in the Cabinet. You know Mr. Speaker, you are a parliamentarian, when Scotland was merged with England, a committee was formed known as the Scotland Committee and that Committee was being consulted whenever anything was done in regard to Scotland. But so far as Coorg is concerned, they have no voice and they are not consulted. Therefore, the citizens of that place have themselves

(Sri C. M. ARUMUGHAM)

